ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೨೧

**ಪಟ್ಟಿ – ೨೮**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತೊಂಬತ್ತನೇ ಅಧಿವೇಶನ**

**(ಮುಂದುವರೆದ ಉಪವೇಶನ)**

**ಬುಧವಾರ, ದಿನಾಂಕ : ೨೫ನೇ ನವೆಂಬರ್, ೨೦೧೫.**

---

## ಸಮೂಹ – III

೧. ಅರಣ್ಯ ಸಚಿವರು.

೨. ಕಂದಾಯ ಸಚಿವರು.

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು.

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು.

೫. ಸಣ್ಣ ನೀರಾವರಿ ಸಚಿವರು.

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು.

೭.. ಕಾರ್ಮಿಕ ರಾಜ್ಯ ಸಚಿವರು.

---

## ನಕಲಿ ಛಾಪಾ ಕಾಗದಗಳ ಜಾಲ

**ಶ್ರೀ ಸೋಮಣ್ಣ ಮ.ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೨೭೩೩ (೩೦೨೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ನಕಲಿ ಛಾಪಾ ಕಾಗದಗಳ (ನಕಲಿ ಇ–ಸ್ಟ್ಯಾಂಪ್) ಜಾಲ ಪತ್ತೆಯಾಗಿರುವುದು ನಿಜವೇ ಅದೇ ರೀತಿ ಅಕ್ರಮ ರೆವಿನ್ಯೂ–ಸ್ಟ್ಯಾಂಪ್‌ಗಳ ಹಾವಳಿಯಿಂದಾಗಿ ದುಬಾರಿ ಬೆಲೆಗೆ ಮಾರಾಟ ಮಾಡುವ ಅಕ್ರಮ ಜಾಲ ದಂದೆ ನಡೆದಿದೆಯೇ ;

(ಆ) ನಕಲಿ ಮೂಲಕ ಅಕ್ರಮವಾಗಿ ದುಡ್ಡು ಮಾಡುವ ದಂಧೆಯಾಗಿ ಮಾಡಿಕೊಂಡಿರುವ ತಂಡವನ್ನು ಸರ್ಕಾರ ಪತ್ತೆ ಮಾಡಿದೆಯೇ ; ಇದರ ರೂವಾರಿಗಳು ಯಾರು ; ಇವರ ಹಿಂದೆ ಇರುವ ಕೈವಾಡ ಯಾರದ್ದು ;

(ಇ) ಈ ನಕಲಿ ಕಾಗದ ಪತ್ರಗಳ ಜೊತೆಗೆ ಉಪ ನೋಂದಣಾಧಿಕಾರಿಗಳ ಅಸಲಿ ಪ್ರಾಕಿಂಗ್ ಜೊತೆಗೆ ಅಸಲಿ ನೋಟರಿ ಪತ್ರಗಳನ್ನು ಸೃಷ್ಠಿಸಿ ಮಾರಾಟ ಮಾಡುತ್ತಿರುವ ಹಗರಣದ ಬಗ್ಗೆ ತನಿಖೆ ಮಾಡಲಾಗಿದೆಯೇ; (ವಿವರ ನೀಡುವುದು)

(ಈ) ಸದರಿ ಪ್ರಕರಣವನ್ನು ಪತ್ತೆ ಹಚ್ಚಿದ್ದು ಹೇಗೆ ; ಇದಕ್ಕೆ ಸಹಕರಿಸುತ್ತಿದ್ದವರುಗಳನ್ನು ಬಂಧಿಸಲಾಗಿದೆಯೇ ; ಇದರ ಕಡೆಗೆ ಸರ್ಕಾರ ಯಾವ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಲಿದೆ ;

(ಉ) ಇದಕ್ಕೆ ಕಾರ್ಯಾಚರಣೆ ಮಾಡಲು ಸರ್ಕಾರ ಮುಂದಾಗುವುದೇ ಈ ನಿಟ್ಟಿನಲ್ಲಿ ಮಧ್ಯವರ್ತಿಗಳ ಹಾವಳಿ ತಡೆ ಹಾಗೂ ಪತ್ತೆಗೆ ಯಾವ ಕ್ರಮ ಅನುಸರಿಸಲಾಗುತ್ತಿದೆ ? (ವಿವರ ನೀಡುವುದು)

# ಸರ್ಕಾರದಿಂದ ಎಸ್‌ಸಿ, ಎಸ್‌ಟಿ, ಅಲ್ಪಸಂಖ್ಯಾತರಿಗೆ ನೀಡುವ ಸೌಲಭ್ಯಗಳ ಬಗ್ಗೆ

**ಶ್ರೀ ಸೋಮಣ್ಣ ಮ.ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೨೭೩೪ (೩೦೩೫) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಣ್ಣ ನೀರಾವರಿ ಯೋಜನೆಯಲ್ಲಿ ಸರ್ಕಾರದಿಂದ ಎಸ್.ಸಿ., ಎಸ್. ಟಿ., ಅಲ್ಪಸಂಖ್ಯಾತರು ಮತ್ತು ಸಣ್ಣ ಹಿಡುವಳಿದಾರರ ರೈತ ಕುಟುಂಬಗಳಿಗೆ ಕೊಳವೆಬಾವಿ ಕೊರೆಸುವ ಯೋಜನೆ ಇದೆಯೇ ; ಇದ್ದರೆ, ರಾಜ್ಯದಲ್ಲಿ ಕೊರೆದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; (೨೦೧೩ ರಿಂದ ಇಲ್ಲಿಯವರೆಗೆ ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಹಾವೇರಿ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ಯೋಜನೆಯಡಿಯಲ್ಲಿ ಕೊಳವೆಬಾವಿ ಕೊರೆಯಿಸಲು ಬಂದ ಅರ್ಜಿಗಳೆಷ್ಟು ; ಅವುಗಳಲ್ಲಿ ಆಯ್ಕೆಯಾದ ಫಲಾನುಭವಿಗಳೆಷ್ಟು ; ಮತ್ತು ತಿರಸ್ಕರಿಸಿದ ಅರ್ಜಿಗಳೆಷ್ಟು ; (೨೦೧೩ ರಿಂದ ಇಲ್ಲಿಯವರೆಗೆ ತಾಲ್ಲೂಕುವಾರು ರೈತರ ಸಂಪೂರ್ಣ ಮಾಹಿತಿ ನೀಡುವುದು)

(ಇ) ಹಾವೇರಿ ಜಿಲ್ಲೆಯಲ್ಲಿ ಕೊಳವೆ ಬಾವಿಯನ್ನು ಕೊರೆಸಲು ಬಂದ ಅನುದಾನ ಎಷ್ಟು ; ಆ ಪೈಕಿ ಅನುದಾನ ಎಷ್ಟು ; ಬಾಕಿ ಉಳಿದ ಅನುದಾನ ಎಷ್ಟು ; ಅನುದಾನ ಉಳಿಯಲು ಕಾರಣವೇನು ; (೨೦೧೩–೧೪ ರಿಂದ ಇಲ್ಲಿಯವರೆಗೆ ಸಂಪೂರ್ಣ ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಹಾವೇರಿ ಜಿಲ್ಲೆಯಲ್ಲಿ ಕೊಳವೆ ಬಾವಿಯನ್ನು ಕೊರೆಯಿಸದೇ ಕೋಟಿ ಬಿಲ್ಲನ್ನು ತೆಗೆದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಕೈಗೊಂಡ ಕ್ರಮವೇನು ;

(ಉ) ಒಂದು ಕೊಳವೆ ಬಾವಿಯನ್ನು ಕೊರೆಸಲು ತಗಲುವ ವೆಚ್ಚ ಎಷ್ಟು ; (ಕೊಳವೆ ಬಾವಿ ಪಂಪ್‌ಸೆಟ್ ಮತ್ತು ವಿದ್ಯುತ್ ಸಂಪರ್ಕ ಒಳಗೊಂಡಂತೆ ವಿವರ ನೀಡುವುದು)

(ಊ) ಕಳೆದ ೩ ವರ್ಷಗಳಲ್ಲಿ ಹಾವೇರಿ ಜಿಲ್ಲೆಯಲ್ಲಿ ನೀರಾವರಿ ಇಲಾಖೆಯಿಂದ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ; (ಯೋಜನೆವಾರು ವಿವರ ನೀಡುವುದು)

(ಋ) ಸದರಿ ಯೋಜನೆಗಳಿಗೆ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು ; ಖರ್ಚಾದ ಅನುದಾನ ಎಷ್ಟು ? (ತಾಲ್ಲೂಕುವಾರು, ಯೋಜನೆವಾರು ವಿವರ ನೀಡುವುದು)

## ಮಳೆ ಮಾಪನ ಕೇಂದ್ರಗಳ ಕುರಿತು

**ಶ್ರೀ ಸೋಮಣ್ಣ ಮ.ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೨೭೩೫ (೩೦೩೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದಲ್ಲಿ ಮಳೆ ಮಾಪನ ಕೇಂದ್ರಗಳ ಸಂಖ್ಯೆ ಎಷ್ಟು ; ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ಕೇಂದ್ರಗಳಿವೆ ; ಹಾವೇರಿ ಜಿಲ್ಲೆಯ ತಾಲ್ಲೂಕುವಾರು ಮಾಹಿತಿ ನೀಡುವುದು ;

(ಆ) ಹಾವೇರಿ ಜಿಲ್ಲೆಯಲ್ಲಿ ಇದ್ದ ಮಳೆ ಮಾಪನ ಕೇಂದ್ರಗಳು ಸುಸ್ಥಿತಿಯಲ್ಲಿ ಇವೆಯೇ ; ಮಳೆ ಮಾಪನ ಕೇಂದ್ರಗಳು ದುರಸ್ಥಿಯಲ್ಲಿ ಇರುವುದು ಹಾಗೂ ಸಿಬ್ಬಂದಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಕೈಗೊಂಡ ಕ್ರಮವೇನು ?

# ಅರಣ್ಯ ಅಧಿಕಾರಿಗಳನ್ನು ಬೇರೆ ಕಡೆ ವರ್ಗಾಯಿಸಿದ ಬಗ್ಗೆ

**ಶ್ರೀ ಸೋಮಣ್ಣ ಮ.ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೨೭೩೬ (೩೦೫೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಇತ್ತೀಚೆಗೆ ಕೆಲ ಅರಣ್ಯಾಧಿಕಾರಿಗಳನ್ನು ಮೊದಲಿದ್ದ ಸ್ಥಳಗಳಿಂದ ಬೇರೆಡೆ ವರ್ಗಾವಣೆ ಮಾಡಿರುವುದರಿಂದ ಅರಣ್ಯ ಒತ್ತುವರಿ ಸೇರಿದಂತೆ ಅಕ್ರಮ ಗಣಿಗಾರಿಕೆ ತನಿಖೆಗೆ ಹಿನ್ನಡೆಯಾಗಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು ; ತನಿಖಾ ವಿಚಾರಣೆಯು ಪ್ರಗತಿಯಲ್ಲಿರುವ ಹಂತದಲ್ಲಿ ಸದರಿ ಅಧಿಕಾರಿಗಳನ್ನು ಆ ಸ್ಥಳಗಳಿಂದ ವರ್ಗಾವಣೆ ಮಾಡಲು ಕಾರಣಗಳೇನು ;

(ಇ) ಈ ವರ್ಗಾವಣೆಗೆ ಯಾರದಾದರೂ ಒತ್ತಡ ಅಥವಾ ಇಲಾಖೆಯ ಪ್ರಭಾವ ಇದ್ದುದು ನಿಜವೇ ; ಇದರಿಂದ ತನಿಖೆಯ ಹಾದಿಗೆ ಅಡಚಣೆಯಾಗುವುದಲ್ಲದೆ ತನಿಖೆ ವಿಳಂಬವಾಗುತ್ತದೆಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಸದರಿ ವರ್ಗಾವಣೆಯನ್ನು ರದ್ದುಪಡಿಸಲು ಸರ್ಕಾರ ಮುಂದಾಗುವುದೇ ; ಈ ವರ್ಗಾವಣೆಗೆ ಸದರಿ ಅಧಿಕಾರಿಗಳ ವಿರೋಧ ಕಂಡುಬಂದಿದೆಯೇ ;

(ಉ) ಇದರಿಂದಾಗಿ ಅರಣ್ಯ ಒತ್ತುವರಿ ಹಾಗೂ ಅಕ್ರಮ ಗಣಿಗಾರಿಕೆಯ ಯಾವ ಯಾವ ಪ್ರಕರಣಗಳ ಹಗರಣಗಳಿಗೆ ತೊಂದರೆಯಾಗುತ್ತದೆ ; ಇದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಕೈಗೊಳ್ಳುವ ಕ್ರಮಗಳೇನು ? (ವಿವರ ಒದಗಿಸುವುದು)

## ಮಂಡ್ಯ ಜಿಲ್ಲೆಯ ಶಿಂಷಾ ಮತ್ತು ಶಿವನ ಸಮುದ್ರ ಸರ್ಕಾರ ಜಮೀನಿನ ಅತಿಕ್ರಮಣ ಬಗ್ಗೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೭೩೭ (೩೦೨೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶಿಂಷಾ ಮತ್ತು ಶಿವನಸಮುದ್ರ ಸುತ್ತಮುತ್ತಲ ಪ್ರದೇಶಗಳ ಸರ್ಕಾರಿ ಜಮೀನನ್ನು ಅತಿಕ್ರಮಣ ಮಾಡಿಕೊಂಡು, ಅಕ್ರಮ ಖಾತೆ ಮಾಡಿಕೊಂಡಿರುವ ಪ್ರಕರಣಗಳು ವರದಿಯಾಗಿದೆಯೇ ; ಈ ರೀತಿ ಅತಿಕ್ರಮಣವಾಗಿ ಅಕ್ರಮ ಖಾತೆಯಾದ ಜಮೀನಿನ ವಿಸ್ತೀರ್ಣ ಎಷ್ಟು ; (ವಿವರ ನೀಡುವುದು) ಈ ಪೈಕಿ ಸರ್ಕಾರ ಪುನಃ ವಶಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣ ಎಷ್ಟು ; (ಪ್ರಕರಣವಾರು ವಿವರ ಒದಗಿಸುವುದು)

(ಆ) ಇದು ಜಲವಿದ್ಯುತ್ ಯೋಜನೆ ಇರುವ ಅತ್ಯಂತ ಸೂಕ್ಷ್ಮ ಪ್ರದೇಶವಾಗಿದ್ದು ಈ ಪ್ರದೇಶದಲ್ಲಿರುವ ಅತಿಕ್ರಮಣದಾರರನ್ನು ಹಾಗೂ ಖಾಸಗಿಯಾಗಿ ಫಾರಂ ಹೌಸ್‌ಗಳನ್ನು ಕಟ್ಟಿಕೊಂಡಿರುವವರನ್ನು ಕೂಡಲೇ ಇಲ್ಲಿಂದ ಹೊರಹಾಕಲು ಕ್ರಮ ಜರುಗಿಸಲಾಗುವುದೇ ?

## ಚಿರತೆಗಳನ್ನು ಸೆರೆ ಹಿಡಿಯುವ ಬಗ್ಗೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೭೩೮ (೩೪೭೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆ–ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿಯ ಡಿ.ಹೊಸಹಳ್ಳಿ, ಕೋಣಸಾಲೆ ಚೊಟ್ಟನಹಳ್ಳಿ, ಗೂಳೂರು ಹಾಗೂ

ಗೂಳೂರು ದೊಡ್ಡಿ ಗ್ರಾಮಗಳ ವ್ಯಾಪ್ತಿಯಲ್ಲಿ ಚಿರತೆಗಳ ಹಾವಳಿ ಜಾಸ್ತಿಯಾಗಿದ್ದು, ಗ್ರಾಮಸ್ಥರು ಹಾಗೂ ಸಾರ್ವಜನಿಕರಿಗೆ ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಚಿರತೆಗಳನ್ನು ಸೆರೆಹಿಡಿಯುವಂತೆ ಗ್ರಾಮಸ್ಥರು ಹಲವಾರು ಬಾರಿ ಮನವಿ ಸಲ್ಲಿಸಿದ್ದರೂ ಸಹ ಚಿರತೆಗಳನ್ನು ಸೆರೆಹಿಡಿಯಲು ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ ; ಇಲ್ಲದಿದ್ದಲ್ಲಿ ಕಾರಣವೇನು ;

(ಇ) ಈ ಹಿಂದೆ ಸದರಿ ಗ್ರಾಮಗಳ ವ್ಯಾಪ್ತಿಯಲ್ಲಿ ಎಷ್ಟು ಚಿರತೆಗಳನ್ನು ಸೆರೆಹಿಡಿಯಲಾಗಿದೆ ; ಸೆರೆ ಹಿಡಿದ ಚಿರತೆಗಳನ್ನು ಎಲ್ಲಿಗೆ ಬಿಡಲಾಗಿದೆ ;

(ಈ) ಈಗ ತೊಂದರೆ ನೀಡುತ್ತಿರುವ ಚಿರತೆಗಳನ್ನು ಸೆರೆಹಿಡಿಯಲು ಎಷ್ಟು ಬೋನುಗಳನ್ನು ಇರಿಸಲಾಗಿದೆ ;

(ಉ) ೫–೬ ಬೋನುಗಳನ್ನು ಇರಿಸಿ ಗ್ರಾಮಸ್ಥರಿಗೆ ತೊಂದರೆ ನೀಡುತ್ತಿರುವ ಚಿರತೆಗಳನ್ನು ಸೆರೆಹಿಡಿಯಲು ಸರ್ಕಾರಕ್ಕೆ ತೊಂದರೆ ಇದೆಯೇ ;

(ಊ) ಇಲ್ಲದಿದ್ದಲ್ಲಿ, ಯಾವಾಗಿನಿಂದ ೫–೬ ಬೋನುಗಳನ್ನು ಇರಿಸಿ ಚಿರತೆಗಳನ್ನು ಸೆರೆಹಿಡಿಯಲು ಕ್ರಮ ಕೈಗೊಳ್ಳಲಾಗುವುದು ?

## ಅನುದಾನರಹಿತ I.T.I ಕಾಲೇಜುಗಳಿಗೆ ವೇತಾನಾನುದಾನ ನೀಡುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–**

೨೭೩೯ (೩೦೨೭) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅನುದಾನರಹಿತ ಐ.ಟಿ.ಐ. ಕಾಲೇಜುಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಹೆಸರು, ವಿಳಾಸ ಸಹಿತ ಮಾಹಿತಿ ನೀಡುವುದು)

(ಆ) ಸದರಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಬೋಧಕೇತರರ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಇ) ಸದರಿ ಕಾಲೇಜುಗಳಿಗೆ ವೇತನಾನುದಾನ ನೀಡಲು ಸರ್ಕಾರ ಉದ್ದೇಶಿಸಿದೆಯೇ ;

(ಈ) ಸದರಿ ಕಾಲೇಜುಗಳಿಗೆ ವೇತನಾನುದಾನ ನೀಡಲು ಬೇಕಾಗುವ ಅಂದಾಜು ಮೊತ್ತವೆಷ್ಟು ;

(ಉ) ಯಾವ ಕಾಲಮಿತಿಯಲ್ಲಿ ವೇತನಾನುದಾನ ನೀಡಲಾಗುತ್ತದೆ ?

## ಸಣ್ಣ ನೀರಾವರಿ ಇಲಾಖೆಯ ಕೆರೆಗಳ ಕಾಮಗಾರಿಗಳು

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–**

೨೭೪೦ (೩೦೨೯) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಯಾವ ಯಾವ ಕೆರೆಗಳಿಗೆ ಏತ ನೀರಾವರಿ ಯೋಜನೆಯನ್ನು ರೂಪಿಸಲಾಗಿದೆ ; ಸದರಿ ಯೋಜನೆಗಳನ್ನು ಪ್ರಾರಂಭಿಸಲಾಗಿದೆಯೇ ; (ವಿವರ ನೀಡುವುದು)

(ಇ) ಕಳೆದ ಎರಡು ವರ್ಷಗಳಿಂದ ಸದರಿ ಕಾಮಗಾರಿಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ; (ವಿವರ ನೀಡುವುದು)

(ಈ) ರಾಜ್ಯದಲ್ಲಿ ಪ್ರಸ್ತುತ ಸಾಲಿನಲ್ಲಿ ಎಷ್ಟು ಕಾಮಗಾರಿಗಳನ್ನು ಪ್ರಾರಂಭಿಸಲು ಂಯೋಜನೆ ರೂಪಿಸಲಾಗಿದೆ ; ಸದರಿ ಕಾವಮಗಾರಿಗಳಿಗೆ ಬಿಡುಗಡೆಯಾಗಿರುವ ಮೊತ್ತವೆಷ್ಟು ; (ವಿವರಗಳು ನೀಡುವುದು)

## ಕಟ್ಟಡ ಕಾರ್ಮಿಕರ ಸೌಲಭ್ಯ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೨೭೪೧ (೩೦೩೨) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾರ್ಮಿಕ ಇಲಾಖಾ ವತಿಯಿಂದ ಕಟ್ಟಡ ಕಾರ್ಮಿಕರಿಗೆ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ ;

(ಆ) ೨೦೧೪–೧೫ ಮತ್ತು ೨೦೧೫–೧೬ನೇ ಸಾಲಿನಲ್ಲಿ ಎಷ್ಟು ಕಟ್ಟಡದ ಕಾರ್ಮಿಕರು ಮರಣ ಹೊಂದಿರುತ್ತಾರೆ ; ಅವರ ವಾರಸುದಾರರಿಗೆ ನೀಡಿರುವ ಪರಿಹಾರದ ಮೊತ್ತ ಎಷ್ಟು ; (ಪೂರ್ಣ ವಿವರ ಒದಗಿಸುವುದು)

(ಇ) ೨೦೧೫–೧೬ನೇ ಸಾಲಿನಲ್ಲಿ ವಿಮೆ ಸೌಲಭ್ಯ ಒದಗಿಸಲಾಗಿರುವ ಕಾರ್ಮಿಕರ ಸಂಖ್ಯೆ ಎಷ್ಟು ; ಎಷ್ಟು ಜನರಿಗೆ ವಿಮೆ ಮೊತ್ತ ಪಾವತಿಸಲಾಗಿದೆ ?

## SCP/TSP. ಅಡಿಯಲ್ಲಿ ಮನೆಗಳ ಹಂಚಿಕೆ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೨೭೪೨ (೩೦೩೧) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೀನುಗಾರಿಕೆ ಇಲಾಖೆಯಿಂದ SCP/TSP ಅಡಿಯಲ್ಲಿ ಹಿಂದೆ ನೀಡಲಾಗುತ್ತಿದ್ದ ಮನೆಗಳ ಹಂಚಿಕೆ ಯೋಜನೆ ಈಗಲೂ ಜಾರಿಯಲ್ಲಿದೆಯೇ ;

(ಆ) ಕಳೆದ ೨ ವರ್ಷಗಳಲ್ಲಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಫಲಾನುಭವಿಗಳಿಗೆ ಎಷ್ಟು ಮನೆಗಳನ್ನು ಎಲ್ಲೆಲ್ಲಿ ವಿತರಿಸಲಾಗಿದೆ ;

(ಇ) ಈ ಯೋಜನಾ ಘಟಕದ ವೆಚ್ಚ ಎಷ್ಟು ?

## ಶ್ರೀ ಗಂಧದ ಸಸಿ ವಿತರಣೆ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು):–**

೨೭೪೩ (೩೫೧೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೫ ವರ್ಷಗಳಿಂದ ಸರ್ಕಾರದ ಅರಣ್ಯ ಪ್ರದೇಶಗಳಲ್ಲಿ ಎಷ್ಟು ಶ್ರೀಗಂಧದ ಗಿಡಗಳನ್ನು ನೆಡಲಾಗಿದೆ ; ಇವುಗಳಲ್ಲಿ ರೈತರಿಗೆ ಪ್ರೋತ್ಸಾಹ ನೀಡಿ ಎಷ್ಟು ಗಿಡಗಳನ್ನು ನೆಡಿಸಲಾಗಿದೆ ;

(ಆ) ಯಾವ ಜಿಲ್ಲೆಗಳಲ್ಲಿ ಬೆಳೆಸಲು ಅವಕಾಶವಿದೆ ; ಸರ್ಕಾರ ಉಚಿತವಾಗಿ ಗಿಡಗಳನ್ನು ಎಲ್ಲೆಲ್ಲಿ ನೀಡಲಾಗುತ್ತಿದೆ ;

(ಇ) ಶ್ರೀಗಂಧ ಮರ ಬೆಳೆಸಲು ಸರ್ಕಾರದ ಮಾನದಂಡಗಳೇನು ;

(ಈ) ಇದ್ದಲ್ಲಿ, ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಶ್ರೀಗಂಧವನ್ನು ಬೆಳೆಯುವ ರೈತರಿಗೆ ಪ್ರೋತ್ಸಾಹ ನೀಡಲು ಸರ್ಕಾರ ಮುಂದಾಗುವುದೇ ?

## ರಾಜ್ಯದಲ್ಲಿ ಜಮೀನು ಸರ್ವೆ ವಿಳಂಬ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು):–**

೨೭೪೪ (೩೫೧೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ರೈತರು ತಮ್ಮ ವ್ಯವಸಾಯ ಜಮೀನು ಸರ್ವೆಗಾಗಿ ಕೋರಿಕೆ ಸಲ್ಲಿಸಿ ಹಲವಾರು ವರ್ಷಗಳಿಂದ ಕಾಯುತ್ತಿರುವ ಅಂಶವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ ; ಹಾಗಿದ್ದಲ್ಲಿ, ಈಗಾಗಲೇ ಕೋರಿರುವ ಜಿಲ್ಲಾ ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು ;

(ಆ) ಶೀಘ್ರ ಸರ್ವೆ ಕಾರ್ಯ ಕೈಗೊಂಡು ರೈತರ ಸಮಸ್ಯೆ ನಿವಾರಿಸುವ ನಿಟ್ಟಿನಲ್ಲಿ ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ ;

(ಇ) ಇಲ್ಲದಿದ್ದಲ್ಲಿ, ಸರ್ವೆ ಕೆಲಸವನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು ?

## ಉತ್ತರ ಕರ್ನಾಟಕದಲ್ಲಿನ ನೇಕಾರರ ಸಂಕಷ್ಟದ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು):–**

೨೭೪೫ (೩೫೧೬) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅಭಿವೃದ್ಧಿ ವಂಚಿತ ಉತ್ತರ ಕರ್ನಾಟಕದಲ್ಲಿ ನೇಕಾರರು ಆರ್ಥಿಕವಾಗಿ ತೀವ್ರ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಇ) ವಸತಿರಹಿತ ನೇಕಾರರು ಹಾಗೂ ವೃತ್ತಿನಿರತ ಬಡ ನೇಕಾರರಿಗೆ ಯಾವ ಯಾವ ಸೌಲಭ್ಯಗಳನ್ನು ಒದಗಿಸಲು ಹಾಗೂ ಪುನಃ ಶ್ಚೇತನಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ; ಕೈಗೊಂಡ ಕ್ರಮದ ಬಗ್ಗೆ ತಾಲ್ಲೂಕುವಾರು ಮಾಹಿತಿ ನೀಡುವುದು ?

## ಬೆಳಗಾವಿ ವಿಭಾಗದಲ್ಲಿ ಜವಳಿ ಪಾರ್ಕ್ ಪ್ರಾರಂಭದ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು):–**

೨೭೪೬ (೩೫೧೩) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ವಿಭಾಗದಲ್ಲಿ ಹೆಚ್ಚಿನ ನೇಕಾರರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಜವಳಿ ಪಾರ್ಕ್ ಪ್ರಾರಂಭಿಸಲು ಎಲ್ಲಾ ಮೂಲಭೂತ ಸೌಕರ್ಯ ಇದ್ದರೂ ಸರ್ಕಾರ ಜವಳಿ ಪಾರ್ಕ್ ಪ್ರಾರಂಭಿಸಲು ವಿಳಂಬ ಮಾಡುತ್ತಿರುವುದಕ್ಕೆ ಕಾರಣವೇನು ;

(ಆ) ಬೆಳಗಾವಿ ವಿಭಾಗದ ಜಿಲ್ಲೆಗಳ ಯಾವ ಯಾವ ಸ್ಥಳಗಳಲ್ಲಿ ಜವಳಿ ಪಾರ್ಕ್ ಪ್ರಾರಂಭಿಸಲು ಉದ್ದೇಶಿಸಲಾಗಿದೆ ;

(ಇ) ಕಳೆದ ೩ ವರ್ಷದಲ್ಲಿ ಈ ವಿಭಾಗದ ನೇಕಾರರಿಗೆ ಅನುಕೂಲ ಮಾಡಿರುವ ವಿವರಗಳನ್ನು ನೀಡುವುದು ?

## ರೈತರ ಬೆಳೆ ಹಾನಿ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು):–**

೨೭೪೭ (೩೦೩೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುಮಕೂರು ಜಿಲ್ಲೆ, ತುರುವೆಕೆರೆ ತಾಲ್ಲೂಕು, ಮುತ್ತುಗದ ಹಳ್ಳಿ ಗ್ರಾಮದ ಸರ್ವೆ ನಂ. ೯೦೬ ತೆಂಗಿನ ತೋಟಕ್ಕೆ ಪಕ್ಕದ ದೊಡ್ಡಹಳ್ಳದಿಂದ ಹೇಮಾವತಿ ಹಾಗೂ ಮಳೆನೀರು ಹರಿದು ರೈತರ ಬೆಳೆ ಹಾನಿಯಾಗಿರುವ ಬಗ್ಗೆ ಸರ್ಕಾರಕ್ಕೆ ವರದಿಯಾಗಿದ್ದು ಯಾವಾಗ ;

(ಆ) ಹಾಗಿದ್ದಲ್ಲಿ, ಸದರಿ ಬೆಳೆ ಹಾನಿ ತಪ್ಪಿಸಲು ಸದರಿ ಹಳ್ಳಕ್ಕೆ ಕಲ್ಲುಗೋಡೆ ನಿರ್ಮಿಸಲು ಹಾಗೂ ಸೇತುವೆ ಎತ್ತರ ಕಡಿಮೆ ಮಾಡಲು ಹಾಗೂ ಈಗಾಗಲೇ ಆಗಿರುವ ನಷ್ಟಕ್ಕೆ ಪರಿಹಾರ ನೀಡಲು ಭಾರಿ ನೀರಾವರಿ ಇಲಾಖೆಯ ಹಾಗೂ ಸ್ಥಳೀಯ ಅಧಿಕಾರಿಗಳು ಈವರೆಗೆ ಕೈಗೊಂಡಿರುವ ಕ್ರಮಗಳೇನು ; (ಪೂರ್ಣ ವಿವರ ಒದಗಿಸುವುದು)

(ಇ) ಮೇಲ್ಕಂಡ ಬೆಳೆ ಹಾನಿ ತಪ್ಪಿಸಲು ಹಾಗೂ ಸಂಬಂಧಪಟ್ಟ ರೈತರಿಗೆ ನಷ್ಟ ಪರಿಹಾರ ನೀಡಲು ಸರ್ಕಾರಿ ಮಟ್ಟದಲ್ಲಿ ಕೈಗೊಂಡಿರುವ ಕ್ರಮಗಳೇನು ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಈ) ಮೇಲ್ಕಂಡ ಕಾಮಗಾರಿಯನ್ನು ಈ ವರ್ಷದಲ್ಲೇ ಪೂರ್ಣಗೊಳಿಸಿ, ಬೆಳೆ ಹಾನಿ ತಪ್ಪಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು ?

## ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು):–**

೨೭೪೮ (೩೦೩೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು ಮತ್ತು ಮೊಳಕಾಲ್ಮೂರು ತಾಲ್ಲೂಕುಗಳಿಗೆ ಭದ್ರಾ ಮೇಲ್ದಂಡೆ ಯೋಜನೆಯಿಂದ ಎಷ್ಟು ಕೆರೆಗಳಿಗೆ ನೀರನ್ನು ಒದಗಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ; (ಕೆರೆಗಳ ವಿವರ ನೀಡುವುದು)

(ಆ) ಈ ಯೋಜನೆ ಯಾವ ಹಂತದಲ್ಲಿ ಇದೆ ;

(ಇ) ಈ ಯೋಜನೆಗೆ ಈವರೆವಿಗೆ ಖರ್ಚಾಗಿರುವ ಮೊತ್ತವೆಷ್ಟು ;

(ಈ) ಈ ಯೋಜನೆ ಪೂರ್ಣಗೊಳಿಸಲು ನಿಗದಿಪಡಿಸಲಾದ ಕಾಲಾವಕಾಶ ಎಷ್ಟು ?

## ರೇಖಲಗೆರೆ ಫೀಡರ್ ಚಾನಲ್ ದುರಸ್ಥಿ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು):–**

೨೭೪೯ (೩೦೪೧) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೫–೧೬ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕಿನ ರೇಖಲಗೆರೆ ಫೀಡರ್ ಚಾನಲ್ ದುರಸ್ಥಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ;

(ಆ) ಸದರಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

## ಅರಣ್ಯ ಭೂಮಿಯ ಒತ್ತುವರಿ ಮತ್ತು ಅಕ್ರಮ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೭೫೦ (೩೨೬೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಗ್ರಾಮಾಂತರ ಸೇರಿದಂತೆ ಸುತ್ತಲಿನ ಹೊರವಲಯದಲ್ಲಿ ಅರಣ್ಯ ಭೂಮಿ ಹಾಗೂ ಕೋಲಾರ ಸಮೀಪದ ಕೆಲ ಕಾಯ್ದಿಟ್ಟ ಅರಣ್ಯ ಭಾಗಗಳಲ್ಲಿ ಭೂಮಿಯನ್ನು ಭೂ ಅಭಿವೃದ್ಧಿದಾರರ ಸಂಚಿನಿಂದ ಅಕ್ರಮವಾಗಿ ಒತ್ತುವರಿಯಾಗಿರುವ ಪ್ರಕರಣಗಳು ಬೆಳಕಿಗೆ ಬಂದಿವೆಯೇ ;

(ಆ) ಬಂದಿದ್ದಲ್ಲಿ, ಯಾವ ಯಾವ ಕಾಯ್ದಿಟ್ಟ ಹಾಗೂ ಇತರೆ ಸಾಮಾಜಿಕ ಅರಣ್ಯ ಪ್ರದೇಶದ ಎಷ್ಟು ಪ್ರದೇಶ ವ್ಯಾಪ್ತಿಯ ಜಮೀನು ಅಕ್ರಮ ಒತ್ತುವರಿಯಾಗಿದೆ ;

(ಇ) ಈ ಸಂರಕ್ಷಿತ ಅರಣ್ಯ ಭೂಮಿ ಉಳಿಸಿಕೊಳ್ಳಲು ಸರ್ಕಾರ ಮುಂದಾಗುವುದೇ ; ಯಾವ ಕ್ರಮಗಳನ್ನು ಕೈಗೊಳ್ಳುತ್ತದೆ ;

(ಈ) ಸದರಿ ಜಮೀನುಗಳ ವ್ಯಾಪ್ತಿಯಲ್ಲಿ ಅಮೂಲ್ಯ ಗಿಡಮೂಲಿಕೆಗಳ ವನಸ್ಪತಿ ಇರುವುದು ನಿಜವೇ ; ಇದ್ದಲ್ಲಿ, ಇದರ ರಕ್ಷಣೆಗೆ ಸರ್ಕಾರ ಯಾವ ಮುಂಜಾಗ್ರತಾ ಕ್ರಮ ಕೈಗೊಂಡಿದೆ ;

(ಉ) ಈ ನಿಟ್ಟಿನಲ್ಲಿ ಅರಣ್ಯ ಹಾಗೂ ಕಂದಾಯ ಇಲಾಖೆಗಳು ಜಂಟಿಯಾಗಿ ಸರ್ವೇಕ್ಷಣೆ ಕಾರ್ಯ ಮಾಡಲು ಇರುವ ತೊಂದರೆಗಳೇನು ; ಸದರಿ ಭೂಭಾಗದ ಒತ್ತುವರಿ ಅಕ್ರಮ ಪ್ರವೇಶಕ್ಕೆ ಅಧಿಕಾರಿಗಳು ಶಾಮೀಲಾಗಿರುವುದು ಕಂಡುಬಂದಿದ್ದಲ್ಲಿ ಇವರುಗಳ ಮೇಲೆ ಯಾವ ಕ್ರಮ ಜರುಗಿಸಲಾಗುವುದು ? (ವಿವರ ನೀಡುವುದು)

## ಬರ ಅಧ್ಯಯನ ತಂಡಗಳ ಭೇಟಿ ಮತ್ತು ಶಿಫಾರಸ್ಸು ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೭೫೧ (೩೨೬೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬರ ಅಧ್ಯಯನಕ್ಕೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ತಂಡಗಳು ಯಾವ್ಯಾವ ಸ್ಥಳಗಳಿಗೆ ಎಷ್ಟು ಬಾರಿ ಭೇಟಿ ಮಾಡಿ ಅಧ್ಯಯನ ನಡೆಸಿವೆ ;

(ಆ) ಬರ ಅಧ್ಯಯನ ತಂಡವು ವೀಕ್ಷಿಸಿದ ಸ್ಥಳಗಳ್ಯಾವುವು ; ರಾಜ್ಯ ಸರ್ಕಾರ ಕೇಂದ್ರಕ್ಕೆ ನೀಡಿರುವ ವರದಿಯ ಮುಖ್ಯಾಂಶಗಳನ್ನು ವಿವರಿಸುವುದು ;

(ಇ) ಈ ಬಗ್ಗೆ ಕೇಂದ್ರದಿಂದ ಬಂದಿರುವ ಪ್ರತಿಕ್ರಿಯೆ ಏನು ; ರಾಜ್ಯ ಸರ್ಕಾರಕ್ಕೆ ನೀಡಿರುವ ಹಣ ಎಷ್ಟು ; ಇದರಲ್ಲಿ ಬಳಕೆ ಮಾಡಿರುವ ಮೊತ್ತ ಎಷ್ಟು ; ಬಾಕಿ ಬರಬೇಕಾಗಿರುವ ಹಾಗೂ ಕೊರತೆ ಇರುವ ಮೊತ್ತದ ವಿವರಗಳನ್ನು ನೀಡುವುದು ;

(ಈ) ಇದೇ ಸಂದರ್ಭದಲ್ಲಿ ತೀವ್ರ ಬರದಿಂದ ಹಾಗೂ ಅತೀ ಮಳೆಯಿಂದ ಮೃತರಾದವರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಹಾಗೂ ಇದಕ್ಕೆ ಸರ್ಕಾರವು ನೀಡಿರುವ ಪರಿಹಾರ ಮೊತ್ತದ ವಿವರಗಳನ್ನು ಒದಗಿಸುವುದು)

(ಉ) ಈ ಪರಿಹಾರ ಮೊತ್ತ ನೀಡುವಿಕೆಯಲ್ಲಿ ತಾರತಮ್ಯ ಉಂಟಾಗುತ್ತಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ತಾರತಮ್ಯ ನಿವಾರಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ?

## ಭೂ ಸುಧಾರಣಾ ಕಾಯ್ದೆಯ ನಿಯಮ ಮಾನದಂಡ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೭೫೨ (೩೦೩೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಭೂ ಸುಧಾರಣಾ ಕಾಯ್ದೆಯಂತೆ ಕೃಷಿ ಭೂಮಿ ಖರೀದಿಗೆ ಇರುವ ನಿಯಮ ಹಾಗೂ ಮಾನದಂಡಗಳೇನು ; ಹಾಲಿ ಹಾಗೂ ಈ ಹಿಂದಿನ ನಿಯಮಗಳ ಮಾಹಿತಿ ನೀಡುವುದು ;

(ಆ) ಇವುಗಳಿಗೆ ತಿದ್ದುಪಡಿ ಮಾಡಲಾಗಿದೆಯೇ ; ಮಾಡಿದ್ದಲ್ಲಿ, ಯಾವ ಯಾವ ಅಂಶಗಳನ್ನು ತಿದ್ದುಪಡಿಯಲ್ಲಿ ತರಲಾಗಿದೆ ; ಇದಕ್ಕೆ ಕಾರಣಗಳೇನು, ಇದರಿಂದ ಯಾರಿಗೆ ಉಪಯೋಗವಾಗಿರುವುದು ;

(ಇ) ಇದಕ್ಕಾಗಿ ಆದಾಯ ಮಿತಿಯನ್ನು ನಿಗದಿಪಡಿಸಲಾಗಿದೆಯೇ ; ಹಾಗಿದ್ದಲ್ಲಿ, ಹಣವಂತರು ಮಾತ್ರವೇ ಇನ್ನು ಮುಂದೆ ಕೃಷಿ ಭೂಮಿ ಪಡೆಯಲು ಅರ್ಹರಾದಂತಾಗುವುದಿಲ್ಲವೇ ;

(ಈ) ಇದರಿಂದಾಗಿ ಭೂಒಡೆತನ ಒಂದೇ ವರ್ಗಕ್ಕೆ ಸೀಮಿತವಾಗಿರಬೇಕೆಂಬ ನಿಯಮಕ್ಕೆ ವಿನಾಯ್ತಿ ಇದೆಯೇ ಎಂಬುದರ ಪೂರ್ಣ ವಿವರ ನೀಡುವುದು ; ಕೃಷಿ ಮಾಡದವರು ಕೂಡ ಕೃಷಿ ಭೂಮಿ ಖರೀದಿಸಲು ಅವಕಾಶವಿದೆಯೇ ? (ವಿವರ ನೀಡುವುದು)

## ಎತ್ತಿನ ಹೊಳೆ ಯೋಜನೆ ಜಾರಿಗೆ ಬಗ್ಗೆ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೭೫೩ (೩೦೬೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರ ಎತ್ತಿನ ಹೊಳೆ ಯೋಜನಾ ವರದಿಯನ್ನು ಸಿದ್ಧಪಡಿಸಿ, ಅನುಷ್ಠಾನಕ್ಕೆ ತರಲು ಯೋಜಿಸಿದೆಯೇ ; ಹಾಗಿದ್ದಲ್ಲಿ, ಯೋಜನಾ ವರದಿ ಮತ್ತು ಇದಕ್ಕೆ ಸಂಬಂಧಿಸಿದ ಆದೇಶಗಳ ಪ್ರತಿಯನ್ನು ನೀಡುವುದು ;

(ಆ) ಈ ಯೋಜನೆಯನ್ನು ಜಾರಿಗೆ ತಂದು ಎಷ್ಟು ಟಿ.ಎಂ.ಸಿ. ಕುಡಿಯುವ ನೀರನ್ನು ಯಾವ ಯಾವ ಜಿಲ್ಲೆಗಳಿಗೆ ಹಂಚಿಕೆ ಮಾಡಲು ಯೋಜಿಸಿದೆ ; (ವಿವರ ನೀಡುವುದು)

(ಇ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನಲ್ಲಿ ಕುಡಿಯುವ ನೀರಿಗಾಗಿ ತುಂಬಾ ಕಷ್ಟದ ಸ್ಥಿತಿಯಲ್ಲಿರುವುದರಿಂದ ಹಾಗೂ ಅಂತರ್ ಜಲ ಮಟ್ಟ ಸಂಪೂರ್ಣ ಕುಸಿದಿರುವುದರಿಂದ ಈ ತಾಲ್ಲೂಕಿಗೆ ಎತ್ತಿನ ಹೊಳೆ ನೀರನ್ನು ಸಂಪೂರ್ಣವಾಗಿ ನೀಡಲಾಗುವುದೇ ; (ವಿವರ ನೀಡುವುದು)

(ಈ) ಈ ಯೋಜನೆಗೆ ಖರ್ಚಾಗುವ ಹಣವೆಷ್ಟು ; ಈ ಯೋಜನೆಯನ್ನು ಕಾರ್ಯಗತಗೊಳಿಸಲು ಬೇಕಾಗುವ ಕಾಲಮಿತಿ ಎಷ್ಟು ? (ಸಂಪೂರ್ಣ ವಿವರ ನೀಡುವುದು)

# ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯ ಅನುಷ್ಠಾನದ ಬಗ್ಗೆ

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನಸಭೆಯಿಂದ ಚುನಾಯಿತರಾದವರು):–**

೨೭೫೪ (೩೦೪೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೃಷಿಕರಿಗಾಗಿ ಜಾರಿಗೊಳಿಸಲಾದ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ಹಸಿರೀಕರಣಕ್ಕೆ ಆದ್ಯತೆ ನೀಡುವ ವಿನೂತನ ಯೋಜನೆಯಾಗಿದ್ದು, ಸದ್ಯದಲ್ಲಿ ಈ ಯೋಜನೆಯನ್ನು ಮುಂದುವರಿಸಲಾಗುತ್ತಿದೆಯೇ ;

(ಆ) ಹಾಗಿದ್ದಲ್ಲಿ, ಅರಣ್ಯ ಇಲಾಖೆಯು ಈ ಯೋಜನೆಯನ್ನು ಕಾಲಬದ್ಧವಾಗಿ ಆಯಾಯ ಸಾಲಿಗೆ ಅನ್ವಯವಾಗುವಂತೆ ಅನುಷ್ಠಾನಗೊಳಿಸಲು ನಿಯಮಾನುಸಾರ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಇಲ್ಲಿ ಅನುಸರಿಸಲಾಗುತ್ತಿದೆಯೇ ;

(ಇ) ಈ ಯೋಜನೆಯಡಿಯಲ್ಲಿ ರೈತ ಬಯಸಿದ ಸಸಿಗಳನ್ನು ರೈತನಿಗೆ ಒದಗಿಸಲು ಆದ್ಯತೆ ನೀಡಬೇಕೆಂಬ ಕಟ್ಟುನಿಟ್ಟಿನ ನಿಯಮಗಳನ್ನು ಅಳವಡಿಸಲಾಗಿದ್ದು, ಇದನ್ನು ಯಥವತ್ತಾಗಿ ಪಾಲಿಸಲಾಗುತ್ತಿದೆಯೇ ;

(ಈ) ಈ ಯೋಜನೆಯಡಿಯಲ್ಲಿ ಕಳೆದ ಸಾಲಿನಲ್ಲಿ ರಾಜ್ಯವ್ಯಾಪಿ ರೈತರಿಂದ ಬಂದ ಒಟ್ಟು ಅರ್ಜಿಗಳೆಷ್ಟು ; ಹಾಗೂ ಈ ಯೋಜನೆಯಡಿಯಲ್ಲಿ ವಿತರಿಸಲಾದ ಒಟ್ಟು ಸಸಿಗಳೆಷ್ಟು ? (ವಿತರಿಸಲಾದ ಸಸಿಗಳ ಜಾತಿವಾರು ವಿವರಗಳನ್ನು ನೀಡುವುದು)

# ಅರಣ್ಯ ಇಲಾಖೆಯಲ್ಲಿ ಎಸ್ಟೇಟ್ ಅಪ್ರೋಜ್ ಮಾದರಿ ಪದ್ಧತಿಯನ್ನು ಜಾರಿಗೊಳಿಸುವ ಕುರಿತು

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನಸಭೆಯಿಂದ ಚುನಾಯಿತರಾದವರು):–**

೨೭೫೫ (೩೦೪೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅರಣ್ಯ ಇಲಾಖೆಯು ಅರಣ್ಯೀಕರಣಕ್ಕೆ ಒತ್ತುಕೊಡುವ ಸಂದರ್ಭಗಳಲ್ಲಿ ಆಯಾ ವರ್ಷಕ್ಕೆ ಅನುಗುಣವಾಗಿ ಹಾಗೂ ಆಯಾ ಸಾಲಿನ ಅವಶ್ಯಕತೆಗೆ ಅನುಗುಣವಾಗಿ ಹಣಕಾಸಿನ ವ್ಯವಸ್ಥೆ ಮತ್ತು ನಿರ್ವಹಣೆ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳುವ ಪದ್ಧತಿ ಪ್ರಸ್ತುತ ಜಾರಿಯಲ್ಲಿರುವುದು ನಿಜವೇ ;

(ಆ) ಈಗಿರುವ ಈ ಪದ್ಧತಿಯನ್ನು ಬದಲಾಯಿಸಿ ಅರಣ್ಯೀಕರಣಕ್ಕೂ ಎಸ್ಟೇಟ್ ಅಪ್ರೋಜ್ ಮಾದರಿಯ ಪದ್ಧತಿ ಅಂದರೆ ಕನಿಷ್ಠ ಐದು ವರ್ಷದ ಅವಧಿಗೆ ನಿರ್ಮಾಣ ಮತ್ತು ನಿರ್ವಹಣೆ ವೆಚ್ಚ ಒಟ್ಟಾಗಿ ಸೇರಿಸಿ ಯೋಜನೆ ರೂಪಿಸಲು ಸಾಧ್ಯವಿಲ್ಲವೇ ;

(ಇ) ಕನಿಷ್ಠ ಐವತ್ತರಿಂದ ನೂರು ಹೆಕ್ಟೇರ್‌ಗಳ ಬ್ಲಾಕ್‌ಗಳನ್ನು ಮಾಡಿ ಶೇ. ೧೦೦ರಷ್ಟು ಯಶಸ್ಸು ಲಭ್ಯವಾಗುವಂತೆ ಒಂದೇ ಏಜೆನ್ಸಿಯ ಮೂಲಕ ಕೆಲಸದ ನಿರ್ವಹಣೆ ಮತ್ತು ಜವಾಬ್ದಾರಿ ನಿರ್ವಹಿಸುವುದನ್ನು ನಿಗದಿಯಾಗುವಂತೆ ನೋಡಿಕೊಳ್ಳಲು ಇಲಾಖೆಗಿರುವ ಸಮಸ್ಯೆಗಳೇನು :

(ಈ) ಈ ರೀತಿಯ ಬದಲಾವಣೆಗಳಿಂದ ಪರಿಣಾಮಕಾರಿ ಫಲಿತಾಂಶಗಳನ್ನು ಆಯಾ ಹಂತಗಳಲ್ಲಿ ಕಾಣಲು ಸಾಧ್ಯವಿದೆ ಎಂಬುದನ್ನು ಇಲಾಖೆ ಒಪ್ಪುತ್ತದೆಯೇ ? (ವಿವರಗಳನ್ನು ಒದಗಿಸುವುದು)

## ಬೆಂಗಳೂರಿನಲ್ಲಿ ತೆರವುಗೊಳಿಸಿರುವ ಕೆರೆಗಳ ಬಗ್ಗೆ

**ಶ್ರೀ ವಿ.ಎಸ್. ಉಗ್ರಪ್ಪ (ನಾಮ ನಿರ್ದೇಶನ ಹೊಂದಿದವರು):–**

೨೭೫೬ (೩೦೪೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದ ಜಿಲ್ಲಾಧಿಕಾರಿಗಳು ತೆರವುಗೊಳಿಸಿರುವ ಕೆರೆಗಳ ಜಮೀನಿನ ವಿಸ್ತೀರ್ಣ ಎಷ್ಟು ; (ಕೆರೆವಾರು ವಿವರಗಳನ್ನು ನೀಡುವುದು)

(ಆ) ಈ ಕೆರೆಗಳ ಅಂಗಳಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಕಟ್ಟಡಗಳೆಷ್ಟು ; ವಿವರ ನೀಡುವುದು ; ಈ ಕೆರೆಗಳ ಅಂಗಳಗಳಲ್ಲಿ ಖಾಸಗಿ ಕಟ್ಟಡ ನಿರ್ಮಾಣ ಸಂಸ್ಥೆಯವರು ನಿರ್ಮಿಸಿರುವ ವಸತಿ ಸಮುಚ್ಛಯಗಳೆಷ್ಟು ; (ವಿವರ ನೀಡುವುದು)

(ಇ) ತೆರವುಗೊಳಿಸಲಾದ ಅನಧಿಕೃತ ವಸತಿ ಕಟ್ಟಡಗಳ ಸಂಖ್ಯೆ ಎಷ್ಟು ; (ಕೆರೆವಾರು ವಿವರಗಳನ್ನು ನೀಡುವುದು)

(ಈ) ಇನ್ನು ತೆರವುಗೊಳಿಸಬೇಕಾದ ಪ್ರದೇಶಗಳಾವುವು ; ಬಡಾವಣೆವಾರು ಮಾಹಿತಿ ಒದಗಿಸುವುದು ?

## ಶಿರಸ್ತೆದಾರರ ವೃಂದದ "ಜೇಷ್ಠತಾ" ಪಟ್ಟಿ ಬಗ್ಗೆ.

**ಶ್ರೀ ರಘುನಾಥರಾವ್ ಮುಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೨೭೫೭(೩೦೫೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೦೮ರ ನಂತರದಲ್ಲಿ ಕಂದಾಯ ಇಲಾಖೆಯ ಶಿರಸ್ತೆದಾರ ವೃಂದದ ನೌಕರರ ರಾಜ್ಯವಾರು ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿರುವ ದಿನಾಂಕ ಯಾವುದು ; (ಸ್ಪಷ್ಟವಾದ ವಿವರವನ್ನು ಒದಗಿಸುವುದು)

(ಆ) ಒಂದು ಬಾರಿ ಅಂತಿಮಗೊಂಡ ಜೇಷ್ಠತಾ ಪಟ್ಟಿಯಲ್ಲಿನ ಜೇಷ್ಠತಾ ಕ್ರಮಗಳನ್ನು ಬದಲಾಯಿಸಲು ಸರ್ಕಾರಕ್ಕೆ ಅಧಿಕಾರವಿದೆಯೇ ; ಇದ್ದಲ್ಲಿ, ಯಾವ ನಿಯಮ/ಕ್ರಮವಿಧಾನುಸಾರವಾಗಿ ಬದಲಾಯಿಸಲಾಗುವುದು ; (ಈ ಬಗ್ಗೆ ಮಾಹಿತಿ ನೀಡುವುದು)

(ಇ) ೨೦೧೩ನೇ ಸಾಲಿನಿಂದ ಈವರೆಗೆ ಶಿರಸ್ತೆದಾರರ ವೃಂದದ ನೌಕರರ ರಾಜ್ಯ ಮಟ್ಟದ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ನೌಕರರ ಜೇಷ್ಠತಾ ಕ್ರಮಾಂಕಗಳನ್ನು ಬದಲಾಯಿಸಿರುವ/ತಿದ್ದುಪಡಿ ಮಾಡಿರುವ ಒಟ್ಟು ಪ್ರಕರಣಗಳು ಎಷ್ಟು ? (ನೌಕರವಾರು ಕಾರಣಗಳ ಸಮೇತ ಮಾಹಿತಿ ಒದಗಿಸುವುದು)

## ಅರಣ್ಯ ಇಲಾಖೆಯ ನೌಕರರ ಬಡ್ತಿಯ ಕುರಿತು

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೨೭೫೮(೩೦೫೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅರಣ್ಯ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚನೆ ಮಾಡಿಕೊಳ್ಳಲಾಗಿದೆಯೇ ; ಹಾಗಿದ್ದಲ್ಲಿ, ಯಾವಾಗಿನಿಂದ ಅನುಷ್ಠಾನಕ್ಕೆ ಬಂದಿರುತ್ತದೆ ;

(ಆ) ಬಡ್ತಿ–ನೇಮಕಾತಿ ನಿಯಮಗಳನ್ನು ರೂಪಿಸಿದ್ದರೂ ಕೂಡಾ ಹಲವು ನೇಮಕಾತಿಗಳಲ್ಲಿ ವಿವಿಧ ಹುದ್ದೆಗಳ ಬಡ್ತಿಯಲ್ಲಿ ಅಕ್ರಮ ನಡೆದಿರುವ ಪ್ರಕರಣ ಬೆಳಕಿಗೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಯಾವ ಯಾವ ಹುದ್ದೆಗಳಲ್ಲಿ ಯಾವ ನೇಮಕಾತಿ/ ಬಡ್ತಿಗಳಲ್ಲಿ ಅಕ್ರಮಗಳು ಜರುಗಿರುತ್ತವೆ ;ಇದಕ್ಕೆ ಕಾರಣಗಳೇನು ;

(ಈ) ಇದರಲ್ಲಿ ಭಾಗಿಯಾಗಿರುವ ಅಧಿಕಾರಿ–ನೌಕರರು ಯಾರು ; ಇವರು ಮಾಡಿರುವ ಅಕ್ರಮ ನೇಮಕ/ಬಡ್ತಿಗಳು ಸಾಬೀತಾಗಿವೆಯೇ ;

(ಉ) ಹಾಗಿದ್ದಲ್ಲಿ, ಇವರುಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಹಾಗೆಯೇ ; ಪಿಸಿಸಿಎಫ್‌ಗೆ ಸಂಬಂಧಪಟ್ಟ ಈ ಹಿಂದಿನ ಹಿರಿಯ ಅಧಿಕಾರಿಗಳು ಇದರಲ್ಲಿ ಭಾಗಿಯಾದ ಬಗ್ಗೆ ಸರ್ಕಾರದ ನಿಲುವೇನು; ನಿಯಮ ಉಲ್ಲಂಘನೆ ಮಾಡಿ ಕಳೆದ ೨ ದಶಕಗಳಿಂದಲೂ ಇಂತಹ ಅಕ್ರಮಗಳ ತಡೆಗೆ ಸರ್ಕಾರ ಮುಂದಾಗುವುದೇ ; ಈ ನಿಟ್ಟಿನಲ್ಲಿ ಸರ್ಕಾರದ ಕ್ರಮಗಳೇನು ? (ವಿವರ ನೀಡುವುದು)

## ಬೀದರ್ ಜಿಲ್ಲೆಯಲ್ಲಿ ನಿರ್ಮಿತಿ ಕೇಂದ್ರದಿಂದ ಸಿ.ಸಿ. ಕ್ಯಾಮರಾ ಖರೀದಿಯಲ್ಲಿ ಅವ್ಯವಹಾರ

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು):–**

೨೭೫(೩೦೫೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ೨೦೧೪ರ ಡಿಸೆಂಬರ್ ೨೬ರಂದು ವಿವಿಧ ಸಾಲಿನ 'ಬಿ.ಆರ್.ಜಿ.ಎಫ್' ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ; ಇದರ ಅನುಷ್ಠಾನದ ಜವಾಬ್ದಾರಿ ಯಾರಿಗೆ ವಹಿಸಲಾಗಿತ್ತು ;

(ಆ) ಇದಕ್ಕಾಗಿ ವೆಚ್ಚ ಮಾಡಿರುವ ಮೊತ್ತ ಎಷ್ಟು ; (ಕಾಮಗಾರಿವಾರು ವಿವರ ನೀಡುವುದು)

(ಇ) ಸಿ.ಸಿ. ಕ್ಯಾಮರಾಗಳನ್ನು ಯಾರಿಂದ ಖರೀದಿಸಲಾಗಿದೆ ; ಇದಕ್ಕಾಗಿ ವೆಚ್ಚ ಮಾಡಿರುವ ಹಣ ಎಷ್ಟು ; ಸಿ.ಸಿ. ಕ್ಯಾಮರಾ ಖರೀದಿಗಾಗಿ

ಟೆಂಡರ್ ಆಹ್ವಾನಿಸಲಾಗಿತ್ತೇ ; ಎಷ್ಟು ಜನ ಟೆಂಡರ್‌ನಲ್ಲಿ ಭಾಗವಹಿಸಿದ್ದರು ; (ಮಾಹಿತಿ ನೀಡುವುದು)

(ಈ) ಸಿ.ಸಿ. ಕ್ಯಾಮರಾಗಳ ಖರೀದಿಯಲ್ಲಿ ಅಕ್ರಮ ನಡೆದಿರುವುದು ನಿಜವೇ; (ಪ್ರಕರಣದ ವಿವರ ನೀಡುವುದು)

(ಉ) ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವ ಯಾವ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ ; ಅವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ಬೀದರ್ ಜಿಲ್ಲೆಯಲ್ಲಿ ನೆಡುತೋಪು ಕಾಮಗಾರಿಗಳ ಕುರಿತು

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೨೭೬೦(೩೦೫೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫ನೇ ಸಾಲಿನಲ್ಲಿ ಬೀದರ ಪ್ರಾದೇಶಿಕ ಹಾಗೂ ಸಾಮಾಜಿಕ ವಿಭಾಗದಲ್ಲಿ ಮಾಡಿದ ಬ್ಲಾಕ್ ಹಾಗೂ ರಸ್ತೆ ಬದಿಯಲ್ಲಿ ನೆಟ್ಟಿರುವ ನೆಡುತೋಪುಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಸದರಿ ನೆಡುತೋಪು ಮಾಡಲು ಖರ್ಚಾದ ಹಣ ಎಷ್ಟು ; (ವಿವರ ನೀಡುವುದು)

(ಇ) ಹಾಗಿದ್ದಲ್ಲಿ, ನಿಖರವಾದ ಸ್ಥಳದ ಮಾಹಿತಿಯನ್ನು ನೀಡುವುದು ; ಯಾವ ಇಲಾಖೆ ವತಿಯಿಂದ ಮಾಡಲಾಗುವುದು ಅಥವಾ ಟೆಂಡರ್ ಮುಖಾಂತರ ಕಾಮಗಾರಿಯನ್ನು ನೀಡಲಾಗಿದೆಯೇ ? (ಈ ಬಗ್ಗೆ ಮಾಹಿತಿ ನೀಡುವುದು)

## ಜಮಖಂಡಿ ತಾಲ್ಲೂಕಿನ ಚಿಕ್ಕಲರೆ ಏತ ನೀರಾವರಿ ಕಾಮಗಾರಿ

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :–**

೨೭೬೧(೩೦೫೮) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಾಗಲಕೋಟೆ ಜಿಲ್ಲೆಯ ಚಿಕ್ಕಲರೆ ಏತ ನೀರಾವರಿ ಕಾಮಗಾರಿಯ ಪ್ರಗತಿ ಯಾವ ಹಂತದಲ್ಲಿದೆ ; (ವಿವರಣೆ ನೀಡುವುದು) ಕಾಮಗಾರಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ; ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಮುಗಿಸುವ ಕರಾರಿನ ಮೇಲೆ ಗುತ್ತಿಗೆ ನೀಡಲಾಗಿದೆ ;

(ಆ) ನೀರು ಹಂಚುಗಾವಲಿಗಳನ್ನು ತೇದಲದಾಗಿ ಗ್ರಾಮದ ರಿ.ಸ.ನಂ. ೧೭೬ರವರೆಗೆ ಅಂದರೆ ಆ ಗ್ರಾಮ ಕೊನೆ ಸರಹದ್ದಿನವರೆಗೆ ತಲುಪಿಸುವ ಯೋಜನೆ ಇದೆಯೇ ; ಇದರಿಂದ ಆ ಗ್ರಾಮದ ಹೆಚ್ಚಿನ ಜಮೀನುಗಳಿಗೆ ನೀರಾವರಿ ಸೌಲಭ್ಯ ದೊರೆಯುವುದಿಲ್ಲವೇ ;

(ಇ) ಕಾಲುವೆಯ ಕಾಮಗಾರಿಗಳನ್ನು ಮೊದಲು ಮಾಡಿ ಜಾಕ್‌ವೆಲ್ಲ್ ಕಾಮಗಾರಿ ತಡಮಾಡುವ ಉದ್ದೇಶವೇನು ?

## ಕೈಮಗ್ಗ ಮತ್ತು ವಿದ್ಯುತ್‌ಚಾಲಿತ ಮಗ್ಗಗಳ ಕೆಲಸಗಾರರ ಕೂಲಿ ಕುರಿತು

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೭೬೨(೩೦೫೯) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೈಮಗ್ಗ ಮತ್ತು ವಿದ್ಯುತ್‌ಚಾಲಿತ ಮಗ್ಗಗಳ ಮೇಲೆ ಕೆಲಸ ಮಾಡುವ ನೇಕಾರರು ತಮ್ಮ ದುಡಿಮೆಗೆ ತಕ್ಕುದಾದ ಕೂಲಿಗಾಗಿ ಹೋರಾಟ

ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ನೇಕಾರರು ಮತ್ತು ಮಾಲೀಕರ ನಡುವೆ ಸಂಧಾನ ಮಾಡಿಸಲು ಸರ್ಕಾರ ಕೈಗೊಂಡ ಕ್ರಮಗಳಾವುವು ;

(ಆ) ಜವಳಿ ಇಲಾಖೆಯ ಕೈಮಗ್ಗ ಮತ್ತು ವಿದ್ಯುತ್‌ಚಾಲಿತ ನೇಕಾರರಿಗೆ ನಿಗಧಿಪಡಿಸಿದ ಕನಿಷ್ಠ ಕೂಲಿ ದರ ಎಷ್ಟು ; (ವಿವರ ನೀಡುವುದು) ಈ ದರಗಳನ್ನು ಎಷ್ಟು ವರ್ಷಗಳಲ್ಲಿ ಯಾವ ಪ್ರಮಾಣದಲ್ಲಿ ಪುನರ್ ಪರಿಶೀಲಿಸಿ ಹೆಚ್ಚಿಸಲು ಇರುವ ಮಾನದಂಡಗಳಾವುವು ; (ವಿವರ ನೀಡುವುದು)

(ಇ) ಹೊಸ ಜವಳಿ ಪಾರ್ಕ್‌ಗಳನ್ನು ಯಾವ ಯಾವ ಜಿಲ್ಲೆಗಳಲ್ಲಿ ನಿರ್ಮಿಸಲಾಗುವುದು ?

## ಕರಾವಳಿ ಕರ್ನಾಟಕದಲ್ಲಿ ಸಮುದ್ರ ಸೇರುತ್ತಿರುವ ನದಿಗಳ ನೀರಿನ ಸದ್ಬಳಕೆ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೭೬೩(೩೨೭೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರಾವಳಿ ಕರ್ನಾಟಕದಲ್ಲಿ ಸಮುದ್ರವನ್ನು ಸೇರುವ ನದಿಗಳ ಮೂಲಕ ಭರ್ತಿ ಸಂದರ್ಭದಲ್ಲಿ ಸಮುದ್ರದ ಉಪ್ಪು ನೀರು ಪೂರ್ವಕ್ಕೆ ಹರಿದು ಸಿಹಿ ನೀರಿನ ಜಲ ಹಾಗೂ ಅದರಿಂದ ಕರಾವಳಿ ಕೃಷಿಯನ್ನು ಹಾಳು ಮಾಡುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ ;

(ಆ) ಈ ಸಮಸ್ಯೆಯನ್ನು ದೂರ ಮಾಡಲು ಸರ್ಕಾರ ಯಾವ ಯೋಜನೆಯನ್ನು ಸಿದ್ದಪಡಿಸಿದೆ ? (ವಿವರ ನೀಡುವುದು)

## ರಾಜ್ಯದಲ್ಲಿ ಸಣ್ಣ ನೀರಾವರಿ ವ್ಯಾಪ್ತಿಗೆ ಬರುವ ಕೆರೆಗಳ ಅಭಿವೃದ್ಧಿ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೭೬೪(೩೦೬೩) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸಣ್ಣ ನೀರಾವರಿ ವ್ಯಾಪ್ತಿಗೆ ಬರುವ ಕೆರೆಗಳ ಸಂಖ್ಯೆ ಎಷ್ಟು ;

(ಆ) ಈ ಕೆರೆಗಳ ಅಭಿವೃದ್ಧಿಗಾಗಿ ಕಳೆದ ೩ ವರ್ಷಗಳಲ್ಲಿ ಹಂಚಿಕೆಯಾದ ಮತ್ತು ಖರ್ಚು ಮಾಡಲಾದ ಹಣ ಎಷ್ಟು ; ಹಣಕಾಸಿನ ಜಿಲ್ಲಾವಾರು ವಿವರ ನೀಡುವುದು ;

(ಇ) ೨೦೧೪–೧೫ನೇ ಸಾಲಿನಲ್ಲಿ ಕೆರೆಗಳ ಹೂಳೆತ್ತುವ ಕಾರ್ಯಕ್ರಮಕ್ಕಾಗಿ ಖರ್ಚಾದ ಮೊತ್ತ ಎಷ್ಟು ?

## ರಾಜ್ಯದಲ್ಲಿ ಬರಪೀಡಿತ ಪರಿಹಾರಕ್ಕಾಗಿ ತೆಗೆದುಕೊಂಡ ಕ್ರಮದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೭೬೫(೩೦೬೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಈ ಬಾರಿ ಬಿದ್ದಿರುವ ಮುಂಗಾರು ಮಳೆಯ ಪ್ರಮಾಣವೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಈ ಬಾರಿಯ ಮಳೆಯ ಪ್ರಮಾಣದ ಕೊರತೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ಪ್ರಸಕ್ತ ಸಾಲಿನಲ್ಲಿ ರಾಜ್ಯದ ಎಷ್ಟು ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ ;

(ಈ) ಈ ಬರಪೀಡಿತ ಪ್ರದೇಶಗಳ ಪರಿಹಾರಕ್ಕಾಗಿ ಕೇಂದ್ರದಿಂದ ಬಿಡುಗಡೆಯಾದ ಅನುದಾನ ಎಷ್ಟು ; ರಾಜ್ಯದಿಂದ ಮಾಡಲಾದ ವೆಚ್ಚವೆಷ್ಟು ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಪಶ್ಚಿಮವಾಹಿನಿ ಯೋಜನೆಯ ಅನುಷ್ಠಾನದ ಬಗ್ಗೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೭೬೬(೩೦೬೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕದ ಕರಾವಳಿ ಭಾಗದಲ್ಲಿ ಸಮುದ್ರ ಸೇರುತ್ತಿರುವ ನದಿಗಳ ನೀರಿನ ಸದ್ಬಳಕೆಗಾಗಿ ಯೋಚಿಸಿರುವ ಪಶ್ಚಿಮ ವಾಹಿನಿ ಯೋಜನೆ ವಿವರ ನೀಡುವುದು ;

(ಆ) ಈ ಯೋಜನೆಯಲ್ಲಿ ನದಿಗಳಿಗೆ ಕಿಂಡಿ ಅಣೆಕಟ್ಟು ನಿರ್ಮಾಣ ಮಾಡುವ ಯೋಜನೆಯನ್ನು ಅಳವಡಿಸಿಕೊಳ್ಳಲಾಗಿದೆಯೇ ;

(ಇ) ಈ ಯೋಜನೆಯನ್ನು ಯಾವ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಲಾಗುವುದು ? (ಯೋಜನೆಯ ವಿವರ ನೀಡುವುದು)

## "ಯುವ ಯುಗ" ಕಾರ್ಯಕ್ರಮದ ಕುರಿತು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೭೬೭(೩೨೬೦) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಗ್ರಾಮೀಣ–ನಗರ ಪ್ರದೇಶಗಳ ಯುವ ಜನಾಂಗಕ್ಕೆ ವಿವಿಧ ಕೌಶಲ್ಯ ತರಬೇತಿಗಳನ್ನು ನೀಡುವ ಸಲುವಾಗಿ "ಯುವ ಯುಗ" ಎಂಬ ಹೊಸ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ನಿಜವೆ ;

(ಆ) ಈ ಕಾರ್ಯಕ್ರಮಕ್ಕಾಗಿ ಮೀಸಲಿಡಲಾಗಿರುವ ಹಣ ಎಷ್ಟು ; ಇಲ್ಲಿಯವರೆಗೆ ಖರ್ಚಾಗಿರುವ ಹಣ ಎಷ್ಟು ;

(ಇ) ಇದುವರೆವಿಗೂ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ "ಯುವ ಯುಗ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ ?

## ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರಾಧಿಕಾರ ರಚನೆ ಮಾಡುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೭೬೮(ಇ೨೫೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರವು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನವನ್ನು ಮಾರ್ಪಡಿಸಿ "ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರಾಧಿಕಾರ" ಮಾಡುವುದಾಗಿ ಘೋಷಿಸಿದ್ದು, ಇದು ಯಾವ ಹಂತದಲ್ಲಿದೆ ;

(ಆ) "ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರಾಧಿಕಾರ" ರಚನೆಗೆ ಎಷ್ಟು ಹಣ ಮೀಸಲಿಡಲಾಗಿದೆ ; ಪ್ರಾಧಿಕಾರದ ಮುಖ್ಯ ಕಛೇರಿಯನ್ನು ಎಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ ;

(ಇ) ಪ್ರಾಧಿಕಾರ ರಚನೆಯಾದ ಮೇಲೆ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಪ್ರತಿ ವರ್ಷ ಅನುದಾನ ಮೀಸಲಿಡಲಾಗುವುದೇ ?

## ಕಲಬುರಗಿಯಲ್ಲಿರುವ ಇ.ಎಸ್.ಐ. ಆಸ್ಪತ್ರೆಯನ್ನು ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೭೬೯(೩೨೫೮) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೇಂದ್ರ ಸರ್ಕಾರವು ಕಲಬುರಗಿಯಲ್ಲಿ ಸ್ಥಾಪನೆ ಮಾಡಲಾಗಿರುವ ಇ.ಎಸ್.ಐ. ಆಸ್ಪತ್ರೆಯನ್ನು ರಾಜ್ಯ ಸರ್ಕಾರಕ್ಕೆ ಹಸ್ತಾಂತರ ಮಾಡುತ್ತಿರುವುದು ನಿಜವೇ ;

(ಆ) ಈ ಕುರಿತು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ನೀಡಿರುವ ಅಭಿಪ್ರಾಯವೇನು ?

## ಅಂತ್ಯ ಸಂಸ್ಕಾರ ಸಹಾಯ "ನಿಧಿ" ಯೋಜನೆಯ ಕುರಿತು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೭೭೦(೩೨೫೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಡತನ ರೇಖೆಗಿಂತ ಕೆಳಗಿರುವ ಕುಟುಂಬವೆಂದು ಪರಿಗಣಿಸಲಿರುವ ಮನದಂಡಗಳಾವುವು, ಸದರಿ ಕುಟುಂಬದ ಸದಸ್ಯರು ಮೃತಪಟ್ಟಲ್ಲಿ ಅಂತ್ಯಸಂಸ್ಕಾರಕ್ಕೆ ಸಹಾಯವಾಗುವ ನಿಟ್ಟಿನಲ್ಲಿ ಜಾರಿಗೆ ತರಲಾಗಿರುವ "ಅಂತ್ಯ ಸಂಸ್ಕಾರ ಸಹಾಯ ನಿಧಿ" ಯೋಜನೆಯಡಿ ಎಷ್ಟು ಸಹಾಯಧನ ನೀಡಲಾಗಿರುತ್ತದೆ ;

(ಆ) ಇದುವರೆಗೆ ಈ ಯೋಜನೆಯು ಸೌಲಭ್ಯ ಪಡೆದಿರುವ ಕುಟುಂಬಗಳೆಷ್ಟು;

(ಇ) ಗ್ರಾಮೀಣ ಭಾಗದ ಬಡಜನರಿಗೆ ಇಂತಹ ಸೌಲಭ್ಯಗಳನ್ನು ಪಡೆಯುವ ಮಾಹಿತಿ ಕೊರತೆ ಇರುವುದರಿಂದ ಮಾಹಿತಿ ಒದಗಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

## ನ್ಯಾಯಾಲಯಗಳ ಪ್ರಕರಣಗಳ ವಿಳಂಬ ವಿಲೇವಾರಿ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೭೭೧(ಇ೨೬೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಂದಾಯ ಇಲಾಖೆಯ 'ತಹಶೀಲ್ದಾರ ನ್ಯಾಯಾಲಯ' ಸಹಾಯಕ ಕಮಿಷನರ್ ನ್ಯಾಯಾಲಯ ಜಿಲ್ಲಾಧಿಕಾರಿಗಳ ನ್ಯಾಯಾಲಯ, ಪ್ರಾದೇಶಿಕ ಆಯುಕ್ತರ ನ್ಯಾಯಾಲಯಗಳಲ್ಲಿ ಬಾಕಿ ಇರುವ ವಿಚಾರಣೆಯ ಹಂತದಲ್ಲಿರುವ ಪ್ರಕರಣಗಳ ಒಟ್ಟು ಸಂಖ್ಯೆ ಎಷ್ಟು ; (ಜಿಲ್ಲಾವಾರು, ವಲಯವಾರು ಮಾಹಿತಿ ನೀಡುವುದು)

(ಆ) ಈ ಮೇಲಿನ ಎಲ್ಲಾ ಹಂತದ ನ್ಯಾಯಾಲಯಗಳಲ್ಲಿ ಪ್ರಕರಣಗಳು ಅತೀ ವಿಳಂಬವಾಗಿ ವಿಲೇವಾರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿನ ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ? (ವಿವರ ನೀಡುವುದು)

## ಖಾಲಿ ಹುದ್ದೆಗಳಿಂದಾಗಿ CRZ ಅರ್ಜಿಗಳ ವಿಳಂಬ ವಿಲೇವಾರಿ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೭೭೨(ಇ೨೬೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ವಿವಿಧ ಹಂತಗಳಲ್ಲಿ ಮಂಜೂರಾದ, ಖಾಲಿ ಇರುವ ಪ್ರಭಾರದಲ್ಲಿರುವ ಹುದ್ದೆಗಳ ಸಂಖ್ಯೆ ಎಷ್ಟು ;

(ಆ) ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಲ್ಲಿ ಹುದ್ದೆಗಳು ಖಾಲಿ ಇರುವುದರಿಂದ ಕರಾವಳಿ ಜಿಲ್ಲೆಗಳಲ್ಲಿ CRZ ನೀರಾಕ್ಷೇಪಣಾ ಪತ್ರ ಕೋರಿ ಸಲ್ಲಿಸುವ ಅರ್ಜಿಗಳು ತೀರಾ ವಿಳಂಬವಾಗಿ ವಿಲೇವಾರಿ ಆಗುತ್ತಿರುವುದು ಹಾಗೂ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ದಕ್ಷಿಣ ಕನ್ನಡ ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಳೆದ ೬ ತಿಂಗಳಲ್ಲಿ ಸ್ವೀಕೃತವಾದ, ವಿಲೇವಾರಿಯಾದ CRZ ಅರ್ಜಿಗಳ ಸಂಖ್ಯೆ ಎಷ್ಟು ; ಯಾವ ಕಾಲಮಿತಿಯಲ್ಲಿ ವಿಲೇವಾರಿಯಾಗಿವೆ ?

## ಮೀನುಗಾರಿಕಾ ದೋಣಿಗಳಿಗೆ ಸಾಧ್ಯತಾ ಪತ್ರ ನೀಡುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೭೭೩(೩೨೬೫) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೀನುಗಾರಿಕೆ ಇಲಾಖೆಯಿಂದ ಕಳೆದ ೨ ವರ್ಷಗಳಲ್ಲಿ ಮೀನುಗಾರಿಕೆ ದೋಣಿಗಳಿಗೆ ನೀಡಿರುವ ಸಾಧ್ಯತಾ ಪತ್ರಗಳೆಷ್ಟು ; (ವರ್ಷವಾರು, ಜಿಲ್ಲಾವಾರು ವಿವರ ನೀಡುವುದು)

(ಆ) ಮೀನುಗಾರಿಕೆ ದೋಣಿಗಳಿಗೆ ಸಾಧ್ಯತಾ ಪತ್ರ ನೀಡಲು ಇರುವ ಮಾನದಂಡಗಳೇನು ;

(ಇ) ಕಳೆದ ೨ ವರ್ಷಗಳಲ್ಲಿ ಸಾಧ್ಯತಾ ಪತ್ರವನ್ನು ಕೋರಿ ಸ್ವೀಕೃತವಾದ ಅರ್ಜಿಗಳೆಷ್ಟು ; (ವರ್ಷವಾರು, ಜಿಲ್ಲಾವಾರು ವಿವರ ನೀಡುವುದು)

(ಈ) ಮೀನುಗಾರಿಕಾ ದೋಣಿಗಳಿಗೆ ನೀಡುವ ಸಾಧ್ಯತಾ ಪತ್ರಗಳ ಸಂಖ್ಯೆ ಹೆಚ್ಚಿಸುವ ಹಾಗೂ ಆ ನಿಟ್ಟಿನಲ್ಲಿ ಮೀನುಗಾರಿಕೆ ಮತ್ತು ಮೀನುಗಾರರಿಗೆ ಪ್ರೋತ್ಸಾಹ ನೀಡುವ ಬಗ್ಗೆ ಸರ್ಕಾರ ಯಾವ ಯಾವ ಕ್ರಮ ಕೈಗೊಳ್ಳಲಿದೆ ?

## ಜವಳಿ ಇಲಾಖೆಯ ಕಾರ್ಯಕ್ರಮ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೮೮೪(೩೨೬೪) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೫–೧೬ನೇ ಸಾಲಿನ ಜವಳಿ ಇಲಾಖೆಯ ಕಾರ್ಯಕ್ರಮಗಳು ಯಾವುವು ;

(ಆ) ಜವಳಿ ಇಲಾಖೆಯು ಕಾರ್ಯಕ್ರಮಗಳಿಗೆ ನಿಗಧಿಯಾದ, ಬಿಡುಗಡೆಯಾದ, ಖರ್ಚಾದ ಅನುದಾನ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಜವಳಿ ನೀತಿಯ ಪ್ರಮುಖ ಅಂಶಗಳಾವುವು ;

(ಈ) ಜವಳಿ ಉದ್ಯಮವನ್ನು ಉತ್ತೇಜಿಸಲು ಹಾಗೂ ನೇಕಾರರ ಅಭಿವೃದ್ಧಿಗೆ ಸರ್ಕಾರ ಹಮ್ಮಿಕೊಂಡ ಕಾರ್ಯಕ್ರಮಗಳೇನು ? (ವಿವರ ನೀಡುವುದು)

## ಮಿನಿ ವಿಧಾನಸೌಧಗಳನ್ನು ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪಿಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೮೮೫(೩೨೮೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಮಿನಿ ವಿಧಾನಸೌಧಗಳನ್ನು ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪಿಸಲಾಗಿದೆ ; ಅವುಗಳಿಗೆ ತಗಲಿದ ವೆಚ್ಚ ಎಷ್ಟು ;

(ಆ) ಮಿನಿ ವಿಧಾನಸೌಧಗಳಲ್ಲಿ ಲಿಫ್ಟ್‌ಗಳನ್ನು ಅಳವಡಿಸದೇ ಇರುವುದರಿಂದ ಅರ್ಜಿದಾರರುಗಳಿಗೆ ಉಂಟಾಗುವ ಅನಾನುಕೂಲತೆಯನ್ನು ನಿವಾರಿಸಲು ಇಲಾಖೆ ಕ್ರಮ ಕೈಗೊಂಡಿದೆಯೇ ; ಮಿನಿ ವಿಧಾನಸೌಧದಲ್ಲಿ ಲಿಫ್ಟ್ ಮತ್ತು ರ್‍ಯಾಂಪ್‌ನ್ನು ಕಡ್ಡಾಯವಾಗಿ ಅಳವಡಿಸಲು ಇಲಾಖೆ ಕ್ರಮ ಕೈಗೊಳ್ಳದೇ ಇರಲು ಕಾರಣಗಳೇನು ; ಯಾವಾಗ ಕ್ರಮ ಕೈಗೊಳ್ಳಲಾಗುವುದು ; (ವಿವರ ನೀಡುವುದು)

(ಇ) ೨೦೧೩–೧೪ ಮತ್ತು ೨೦೧೪–೧೫ ರಲ್ಲಿ ರಾಜ್ಯದಲ್ಲಿ ಎಷ್ಟು ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇಮಕ ಮಾಡಲಾಗಿದೆ ; ಯಾವ ಮಾನದಂಡವನ್ನು ಅನುಸರಿಸಲಾಗಿದೆ ; (ವಿವರ ನೀಡುವುದು)

(ಈ) ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಯ ಕಛೇರಿಗಳನ್ನು ಮಂಗಳೂರಿನ ಪಡೀಲು ಪ್ರದೇಶಕ್ಕೆ ಸ್ಥಳಾಂತರಿಸುವ ಬಗ್ಗೆ ಇಲಾಖೆ ಕೈಗೊಂಡಿರುವ ಕ್ರಮಗಳೇನು ; ಎಷ್ಟು ಅನುದಾನವನ್ನು ಮೀಸಲಿಡಲಾಗಿದೆ ; ಕಾಮಗಾರಿ ಪ್ರಾರಂಭಗೊಳ್ಳುವುದು ಯಾವಾಗ ? (ವಿವರ ನೀಡುವುದು)

## ಅರಣ್ಯ ಪ್ರದೇಶದಲ್ಲಿ ಆನೆಗಳ ಹಾವಳಿಗಳನ್ನು ತಪ್ಪಿಸುವ ಕುರಿತು

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೭೭೬(೩೨೭೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅರಣ್ಯ ಪ್ರದೇಶದಲ್ಲಿ ಆನೆಗಳ ಹಾವಳಿಗಳನ್ನು ತಪ್ಪಿಸಲು ರೈಲು ಪಟ್ಟಿ ಮಾದರಿಯ ಬೇಲಿಗಳನ್ನು ರಚಿಸಲು ಇಲಾಖೆ ಖರ್ಚು ಮಾಡಿದ ಮೊತ್ತ ಎಷ್ಟು ; ಉದ್ದೇಶಿಸಿರುವ ಅನುದಾನ ಎಷ್ಟು ;

(ಆ) ೨೦೧೩–೧೪ ಮತ್ತು ೨೦೧೪–೧೫ ರಲ್ಲಿ ಆನೆ ಹಾವಳಿಗಳಿಂದ ಮೃತಪಟ್ಟವರ ಸಂಖ್ಯೆ ಎಷ್ಟು ; ಅವರಿಗೆ ನೀಡಿದ ಪರಿಹಾರ ಧನ ಎಷ್ಟು ; ಉಂಟಾದ ಬೆಳೆ ನಷ್ಟ ಎಷ್ಟು ;

(ಇ) ಅರಣ್ಯ ಪ್ರದೇಶದಲ್ಲಿ ಆನೆಗಳನ್ನು ಪತ್ತೆ ಹಚ್ಚಲು ಇಲಾಖೆ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಈ) ಕರ್ನಾಟಕ ರಾಜ್ಯದ ಅರಣ್ಯ ಪ್ರದೇಶದಲ್ಲಿರುವ ಒಟ್ಟು ಆನೆಗಳ ಸಂಖ್ಯೆ ಎಷ್ಟು ; ನಿಖರವಾಗಿ ಗುರುತಿಸಲಾಗಿದೆಯೇ ; (ವಿವರ ನೀಡುವುದು)

(ಉ) ಅರಣ್ಯ ಇಲಾಖೆಯಲ್ಲಿ ಕಳ್ಳ ಬೇಟೆ ನಿಯಂತ್ರಣ ಮಾಡಲು ಎಷ್ಟು ಶಿಬಿರಗಳನ್ನು ನೇಮಿಸಲಾಗಿದೆ ; ಕಳೆದ ೨ ವರ್ಷಗಳಲ್ಲಿ ಪತ್ತೆ ಹಚ್ಚಿದ ಪ್ರಕರಣಗಳೆಷ್ಟು ? (ವಿವರ ನೀಡುವುದು)

## ಅರಣ್ಯ ಇಲಾಖೆಯು ಅಕ್ರಮ ಸಾಗಾಟದಲ್ಲಿ ಜಪ್ತಿ ಮಾಡಿದ ಅರಣ್ಯ ಸಂಪತ್ತು ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೭೭೭(೩೨೭೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೩–೧೪ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಅರಣ್ಯ ಇಲಾಖೆಯು ಅಕ್ರಮ ಸಾಗಾಟದಲ್ಲಿ ಜಪ್ತಿ ಮಾಡಿದ ಅರಣ್ಯ ಸಂಪತ್ತು ಎಷ್ಟು ; ಜಪ್ತಿ ಮಾಡಿದ ಸ್ವತ್ತು ಮತ್ತು ವಾಹನಗಳನ್ನು ವಿಲೇವಾರಿ ಮಾಡಲಾಗಿದೆಯೇ ; ಇದರಿಂದ ಇಲಾಖೆಗೆ ಬಂದ ಆದಾಯ ಎಷ್ಟು ;

(ಆ) ಅರಣ್ಯ ಸಂಪತ್ತುಗಳನ್ನು ಹೆಚ್ಚಿಸಲು ಮತ್ತು ಅವುಗಳ ಸುರಕ್ಷತೆಗೆ ಇಲಾಖೆ ಕೈಗೊಂಡ ಕಾರ್ಯಕ್ರಮಗಳೇನು ; ಅರಣ್ಯ ಪ್ರದೇಶವನ್ನು ಹೆಚ್ಚುವರಿಗೊಳಿಸಲು ೨೦೧೪-೧೫ರಲ್ಲಿ ಇಲಾಖೆ ಮೀಸಲಿಟ್ಟ ಅನುದಾನ ಎಷ್ಟು ; ೨೦೧೩-೧೪ರ ವರ್ಷದಲ್ಲಿ ಅರಣ್ಯ ಬೆಳೆಸಲು ಇಲಾಖೆ ಮೀಸಲಿಟ್ಟ ಅನುದಾನ ಎಷ್ಟು ;

(ಇ) ರಾಜ್ಯದ ಎಷ್ಟು ಪ್ರದೇಶಗಳಲ್ಲಿ ಟ್ರೀ ಪಾರ್ಕ್ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ ; ಪೂರ್ಣಗೊಂಡ ಯೋಜನೆಗಳಾವುವು ; ಖರ್ಚು ಮಾಡಿದ ಅನುದಾನ ಎಷ್ಟು ; (ವಿವರ ನೀಡುವುದು)

(ಈ) ಅರಣ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ನೌಕರರ ಸಂಖ್ಯೆ ಎಷ್ಟು ; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ಭರ್ತಿ ಮಾಡಲು ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ರಾಜ್ಯದಲ್ಲಿರುವ ಕಾರ್ಮಿಕರ ಬಗ್ಗೆ ಕಾರ್ಮಿಕ ನೀತಿ ರಚಿಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :-**

೨೭೭೮(೩೨೬೯) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿರುವ ಕಾರ್ಮಿಕರ ಬಗ್ಗೆ ಕಾರ್ಮಿಕ ನೀತಿ ರಚಿಸಲು (Labour Policy) ಇಲಾಖೆ ಕೈಗೊಂಡಿರುವ ಕ್ರಮಗಳೇನು ;

(ಆ) ರಾಜ್ಯದಲ್ಲಿ ಸ್ಪಷ್ಟವಾದ ಕಾರ್ಮಿಕ ನೀತಿ ಇದೆಯೇ ; ಇದ್ದರೆ, ವಿವರ ನೀಡುವುದು ;

(ಇ) ಬೀಡಿ ಕಾರ್ಮಿಕರ ತುಟ್ಟಿ ಭತ್ಯೆಯನ್ನು ಪಾವತಿಸಲು ಇಲಾಖೆ ಕೈಗೊಂಡಿರುವ ಕ್ರಮಗಳೇನು ; ರಾಜ್ಯದಲ್ಲಿರುವ ಬೀಡಿ ಕಾರ್ಮಿಕರಿಗಾಗಿ ಒಟ್ಟು ಎಷ್ಟು ನಿವೇಶನ ಮತ್ತು ಮನೆಗಳನ್ನು ಒದಗಿಸಲಾಗಿದೆ ;

(ಈ) ಬೀಡಿ ಕಾರ್ಮಿಕರಿಗೆ ಜೀವನ ಪರಿಸ್ಥಿತಿಯನ್ನು ಮತ್ತು ಅವರ ಸಮಸ್ಯೆಗಳನ್ನು ತಿಳಿಯಲು ಇಲಾಖೆಯು ಸಮಿತಿಯೊಂದನ್ನು ರಚಿಸುವ ಆಶ್ವಾಸನೆ ನೀಡಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು ; ವಿಳಂಬಗೊಳ್ಳಲು ಕಾರಣವೇನು ; (ವಿವರ ನೀಡುವುದು)

(ಉ) ರಾಜ್ಯದಲ್ಲಿರುವ ಒಟ್ಟು ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಊ) ರಾಜ್ಯದಲ್ಲಿರುವ ಬೀಡಿ ಕಾರ್ಮಿಕರಿಗೆ ನೀಡಿದ ನಿವೇಶನ ಎಷ್ಟು ; ನಿವೇಶನ ರಹಿತ ಕಾರ್ಮಿಕರ ಸಂಖ್ಯೆ ಎಷ್ಟು ? (ವಿವರ ನೀಡುವುದು)

## ಕರ್ನಾಟಕ ರಾಜ್ಯದಲ್ಲಿ ಮೀನು ಮಾರುಕಟ್ಟೆಯನ್ನು ಸ್ಥಾಪಿಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೭೭೯(ಖ೨೭೦) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಹಾಗೂ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫ರಲ್ಲಿ ಕರ್ನಾಟಕ ರಾಜ್ಯದಲ್ಲಿ ಎಷ್ಟು ಮೀನು ಮಾರುಕಟ್ಟೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ; ಮಾರುಕಟ್ಟೆಗಳ ಸ್ಥಾಪನೆಗೆ ಮೀನುಗಾರಿಕೆ ಇಲಾಖೆ ಬಿಡುಗಡೆಗೊಳಿಸಿದ ಅನುದಾನ ಎಷ್ಟು ;

(ಆ) ರಾಜ್ಯದಲ್ಲಿ ಮೀನಿನ ದರವನ್ನು ನಿಗದಿಪಡಿಸಲು ಇಲಾಖೆ ಮುಂದೆ ಏನಾದರೂ ಯೋಜನೆಗಳಿವೆಯೇ ; ಇಲ್ಲದಿದ್ದರೆ, ಕಾರಣಗಳೇನು ;

(ಇ) ಮೀನು ಮಾರಾಟದಲ್ಲಿ ಇಲಾಖೆ ಮೇಲಿರುವ ನಿಯಂತ್ರಣಗಳೇನು ; ಪ್ರಸ್ತುತ ಮೀನಿನ ದರವನ್ನು ನಿಗದಿಪಡಿಸುವವರು ಯಾರು ; ದರ ಏರಿಕೆಯಿಂದ ಮೀನು ಪಡೆಯುವ ಗ್ರಾಹಕರ ಮೇಲೆ ಹೊರೆಯಾಗುತ್ತಿರುವುದು ಇಲಾಖೆಯ ಗಮನದಲ್ಲಿದೆಯೇ ; (ವಿವರ ನೀಡುವುದು)

(ಈ) ೨೦೧೪–೧೫ರಲ್ಲಿ ಮೀನು ಮಾರಾಟ ದರ ನಿಯಂತ್ರಣದ ಬಗ್ಗೆ ಇಲಾಖೆ ಕೈಗೊಂಡಿರುವ ಕ್ರಮಗಳೇನು ; ಒಟ್ಟು ಉತ್ಪಾದಿಸಿದ ಮೀನುಗಳ ಸಂಖ್ಯೆ ಎಷ್ಟು ? (ವಿವರ ನೀಡುವುದು)

## ತುಂಗಭದ್ರಾ ಎಡದಂಡೆ ಕಾಲುವೆ ಲೈನಿಂಗ್‌ನಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೭೮೦(೩೨೭೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುಂಗಭದ್ರಾ ಎಡದಂಡೆ ಕಾಲುವೆ ಮತ್ತು ಸಹಾಯಕ ಕಾಲುವೆ (Subsidiary) ನಾಲಾಗಳಲ್ಲಿ ಮಾಡಿರುವ ಕಾಂಕ್ರೀಟ್ ಲೈನಿಂಗ್‌ನಲ್ಲಿ ಕಳಪೆ ಮಟ್ಟದ ಕಾಮಗಾರಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದರೆ, ಆ ಕಾಮಗಾರಿಗಳಿಗೆ ಖರ್ಚು ಮಾಡಿರುವ ಹಣ ಎಷ್ಟು ; ಅದನ್ನು ದುರಸ್ತಿ ಮಾಡಲು ತಗಲುವ ಖರ್ಚು ಎಷ್ಟು ? (ವಿವರ ನೀಡುವುದು)

## ಸರ್ವೆ ನಂಬರ್ ೭೬ , ಚಿಕ್ಕಲಸಂದ್ರದ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೭೮೧(೩೫೨೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ದಕ್ಷಿಣ ತಾಲ್ಲೂಕು, ಚಿಕ್ಕಲಸಂದ್ರ ಗ್ರಾಮದ ಸರ್ವೆ ನಂ. ೭೬ರಲ್ಲಿ ಒತ್ತುವರಿ ತೆರವುಗೊಳಿಸುವ ಸಂದರ್ಭದಲ್ಲಿ ವೆಂಕಟಸ್ವಾಮಿ ಅವರಿಗೆ ಸೇರಿರುವ ૩ ಎಕರೆ ಜಮೀನನ್ನು ಸಹ ಒತ್ತುವರಿ ಜಾಗವೆಂದು ತೆರವುಗೊಳಿಸಿರುವುದು ನಿಜವೇ ;

(ಆ) ಇದರಿಂದ ಅವರು ಕೋರ್ಟಿಗೂ ಹೋಗಿ ಕೇಳಿದಾಗ ಇಲಾಖೆ ಅಧಿಕಾರಿಗಳು ಪರಿಹಾರ ನೀಡದೆ ಕಛೇರಿಯಲ್ಲಿದ್ದ ಜೆರಾಕ್ಸ್ ಯಂತ್ರ, ಟೇಬಲ್, ಚೇರ್ ಹಾಗೂ ಇನ್ನಿತರ ವಸ್ತುಗಳನ್ನು ಸೀಜ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಅವರಿಗೆ ಈಗಲಾದರೂ ಪರಿಹಾರ ನೀಡಲಾಗುವುದೇ ;

(ಇ) ಈ ರೀತಿ ಅನಾಹುತಕ್ಕೆ ಕಾರಣವೇನು ; ಕಾರಣವಾದ ವ್ಯಕ್ತಿಗಳು ಯಾರು ; ಇದು ಅಧಿಕಾರಿಗಳ ನಿರ್ಲಕ್ಷವಲ್ಲವೇ ; ಇದರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು ?

## ಕಂಠೀರವ ಕ್ರೀಡಾಂಗಣದಲ್ಲಿ ಕ್ರೀಡಾ ಕೂಟದ ಸಂದರ್ಭದಲ್ಲಿ ಡ್ರಗ್ಸ್ ಸೇವನೆ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೭೮೨ (೩೨೭೬) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ರಾಜಧಾನಿಯ ಕಂಠೀರವ ಕ್ರೀಡಾಂಗಣದಲ್ಲಿ ಹಿರಿಯರ ಮತ್ತು ಕಿರಿಯರ ಅಥ್ಲೆಟಿಕ್ ಕ್ರೀಡಾ ಕೂಟದ ಸಂದರ್ಭದಲ್ಲಿ ಸ್ಪರ್ಧಿಗಳು ಡ್ರಗ್ಸ್ ಉಪಯೋಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು;

(ಆ) ಆಂಟಿ ಡೋಪಿನ್ ಪರೀಕ್ಷೆಯಲ್ಲಿ ಸಿಕ್ಕಿಬಿದ್ದ ಕ್ರೀಡಾ ಪಟುಗಳ ಸಂಖ್ಯೆ ಎಷ್ಟು; ಇವರ ಮೇಲೆ ತನಿಖೆ ಮಾಡಲಾಗಿದೆಯೇ; ಆ ಪೈಕಿ ಸಾಬೀತಾದ ಪ್ರಕರಣಗಳೆಷ್ಟು? (ವಿವರ ನೀಡುವುದು)

## ಮಂಡ್ಯ ಜಿಲ್ಲೆಯಲ್ಲಿ ಏತ ನೀರಾವರಿಗಳ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೭೮೩ (೩೫೨೪) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯಲ್ಲಿರುವ ಏತ ನೀರಾವರಿಗಳು ಎಷ್ಟು ಅವು ಯಾವುವು;

(ಆ) ಇವುಗಳಲ್ಲಿ ಪ್ರಾರಂಭವಾಗದೇ ಉಳಿದಿರುವ ಯೋಜನೆಗಳು ಯಾವುವು; ಕಾರಣವೇನು;

(ಇ) ಇವುಗಳ ಪ್ರಸ್ತುತ ಸ್ಥಿತಿ–ಗತಿಗಳ ಬಗ್ಗೆ ಸಂಪೂರ್ಣ ವಿವರ ನೀಡುವುದು?

## ಕೌಶಲ್ಯ ತರಬೇತಿ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೭೮೪ (೩೫೨೫) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫ ಮತ್ತು ೨೦೧೫–೧೬ ರಲ್ಲಿ ಕೌಶಲ್ಯ ತರಬೇತಿ ಯೋಜನೆಗೆ ರಾಜ್ಯ/ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು; ತರಬೇತಿ ನೀಡಿದ ಸರ್ಕಾರಿ ಅಥವಾ ಇತರ ಸಂಸ್ಥೆಗಳು ಯಾವುವು; ಯಾವ ಯಾವ ಸಂಸ್ಥೆಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ; ಬಿಡುಗಡೆ ಮಾಡಿದ ಹಣದಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ವಿಭಾಗವಾರು (ಟ್ರೇಡ್) ಹಾಗೂ ಜಿಲ್ಲಾವಾರು ಮಾಹಿತಿಯನ್ನು ನೀಡುವುದು)

(ಆ) ೨೦೧೪–೧೫ ರಲ್ಲಿ ಬಿ.ಬಿ.ಎಂ.ಪಿ ಬಿ.ಎಮ್.ಆರ್.ಡಿ. ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಗಳಲ್ಲಿ ಕಟ್ಟಡ ನಿರ್ಮಾಣ ಮಾಲೀಕರಿಂದ ಮತ್ತು ಡೆವಲಪರ್‌ಗಳಿಂದ ಸಂಗ್ರಹವಾದ ಹಣವೆಷ್ಟು;

(ಇ) ೨೦೧೪–೧೫ ಮತ್ತು ೨೦೧೫–೧೬ ರಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಕಳೆದ ೫ ವರ್ಷಗಳ ಅವಧಿಯಲ್ಲಿ ಕಟ್ಟಡ ಕಾಮಗಾರಿಗಳಲ್ಲಿ ಮೃತಪಟ್ಟ ನೋಂದಾಯಿತ/ನೋಂದಾಯಿತರಲ್ಲದ ಕಾರ್ಮಿಕರ ಸಂಖ್ಯೆ ಮತ್ತು ನೀಡಿದ ಪರಿಹಾರ ಮೊತ್ತದ ಮಾಹಿತಿಯನ್ನು ಜಿಲ್ಲಾವಾರು ನೀಡುವುದು?

## ರಾಜ್ಯದ ಕೆರೆಗಳಲ್ಲಿ ಮೀನು ಸಾಕಾಣಿಕೆ ಬಗ್ಗೆ.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೨೭೮೫ (೩೪೪೩) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಮೀನು ಸಾಕಾಣಿಕೆ ನಡೆಸುತ್ತಿರುವ ಕೆರೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ೨೦೧೫–೧೬ನೇ ಸಾಲಿನಲ್ಲಿ ಈ ಕೆರೆಗಳಲ್ಲಿ ಎಷ್ಟು ಮೀನು ಮರಿಗಳನ್ನು ಬಿಡಲಾಗಿದೆ;

(ಇ) ಈ ಕೆರೆಗಳಲ್ಲಿನ ಮೀನುಗಳ ಪಾಶುವಾರು ಹಕ್ಕುಗಳನ್ನು ಹರಾಜು ಮಾಡುವವರ ಮೂಲಕ ೨೦೧೪–೧೫ನೇ ಸಾಲಿನಲ್ಲಿ ಸರ್ಕಾರಕ್ಕೆ ಬಂದ ಆದಾಯವೆಷ್ಟು;

(ಈ) ಮೀನು ಮರಿಗಳ ಉತ್ಪಾದನೆ ಕೇಂದ್ರಗಳಾವುವು; ಸರ್ಕಾರ ಈ ಕೇಂದ್ರಗಳ ನಿರ್ವಹಣೆಗೆ ಖರ್ಚು ಮಾಡುವ ಹಣವೆಷ್ಟು? (ಜಿಲ್ಲವಾರು ಮಾಹಿತಿ ನೀಡುವುದು)

## ವಿಶೇಷ ಘಟಕ ಯೋಜನೆ ಅನುಷ್ಠಾನ ಕುರಿತು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೨೭೮೬ (೩೪೪೨) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ೨೦೧೪–೧೫ ಹಾಗೂ ೨೦೧೫–೧೬ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ ರೈತರಿಗೆ ಎಷ್ಟು ಕೊಳವೆ ಬಾವಿಗಳನ್ನು ಕೊರೆಸಲು ಗುರಿ ಹಾಕಿಕೊಳ್ಳಲಾಗಿತ್ತು;

(ಆ) ಈ ಯೋಜನೆಯಡಿ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ಎಷ್ಟು ಜನ ರೈತ ಫಲಾನುಭವಿಗಳಿಗೆ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ; (ಫಲಾನುಭವಿವಾರು ಮಾಹಿತಿ ನೀಡುವುದು)

(ಇ) ಈ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆಯೇ;

(ಈ) ಇನ್ನು ವಿದ್ಯುತ್ ಸಂಪರ್ಕ ಕಲ್ಪಿಸಬೇಕಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

## ರಾಜ್ಯದಲ್ಲಿರುವ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೨೭೮೭ (೩೪೪೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿರುವ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಾವುವು;

(ಆ) ಈ ಯೋಜನೆಗಳಿಂದ ನೀರಾವರಿ ಪ್ರದೇಶಕ್ಕೆ ಒಳಪಡುವ ಒಟ್ಟು ಪ್ರದೇಶ ಎಷ್ಟು;

(ಇ) ಈ ಯೋಜನೆಗಳನ್ನು ಸಂಪೂರ್ಣವಾಗಿ ಮುಕ್ತಾಯಗೊಳಿಸಲು ಬೇಕಾದ ಅನುದಾನ ಹಾಗೂ ಕಾಲಾವಧಿ ಎಷ್ಟು;

(ಈ) ಈ ಯೋಜನೆಗಳು ಈಗ ಯಾವ ಹಂತದಲ್ಲಿದೆ?

## ಅನುದಾನಿತ ಐ.ಟಿ.ಐ ಕಾಲೇಜುಗಳ ಸಿಬ್ಬಂದಿಗೆ ಪಿಂಚಣಿ ಸೌಲಭ್ಯ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೨೭೮೮ (೩೪೪೪) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಖಾಸಗಿ ಅನುದಾನಿತ ಐ.ಟಿ.ಐ ಕಾಲೇಜುಗಳ ಸಿಬ್ಬಂದಿಗೆ ಪಿಂಚಣಿ ಹಾಗೂ ಇತರೆ ಸೌಲಭ್ಯಗಳನ್ನು ವಿಸ್ತರಿಸಿ ಯಾವ ದಿನಾಂಕದಂದು ಆದೇಶ ಹೊರಡಿಸಲಾಗಿದೆ;

(ಆ) ಈ ಆದೇಶದನ್ವಯ ಎಷ್ಟು ಜನ ಸಿಬ್ಬಂದಿಗಳು ಪಿಂಚಣಿ ಹಾಗೂ ಇತರೆ ಸೌಲಭ್ಯಗಳನ್ನು ಪಡೆಯಲು ಅರ್ಹತೆ ಹೊಂದಿದ್ದಾರೆ;

(ಇ) ಇಲ್ಲಿಯವರೆಗೆ ಎಷ್ಟು ಜನ ಸಿಬ್ಬಂದಿಗಳಿಗೆ ಪಿಂಚಣಿ ಹಾಗೂ ಇತರೆ ಸೌಲಭ್ಯಗಳನ್ನು ನೀಡಲಾಗಿದೆ;

(ಈ) ಸೌಲಭ್ಯ ವಿಸ್ತರಣೆ ತಡವಾಗಲು ಕಾರಣಗಳೇನು; ಎಲ್ಲ ಸಿಬ್ಬಂದಿಗೆ ಯಾವಾಗ ಪಿಂಚಣಿ ಹಾಗೂ ಇತರೆ ಸೌಲಭ್ಯ ವಿಸ್ತರಿಸಲಾಗುವುದು?

## ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿಗಳು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೨೭೮೯ (ಇಳಳಇ) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; (ಪದನಾಮ, ವೇತನ ಶ್ರೇಣಿ ಇತ್ಯಾಧಿ ಸಂಪೂರ್ಣ ಮಾಹಿತಿ ನೀಡುವುದು)

(ಆ) ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು;

(ಇ) ೨೦೦೧ ರಿಂದ ಇಲ್ಲಿಯವರೆಗೆ ಎಷ್ಟು ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಈ ಸಿಬ್ಬಂದಿಗಳ ನೇಮಕಾತಿಗೆ ಯಾವ ವಿಧಾನವನ್ನು ಅನುಸರಿಸಲಾಗಿದೆ; ಮಾನದಂಡಗಳೇನು?

## ನಗರಗಳಲ್ಲಿ ಹಾಗೂ ನಗರಗಳ ಅಂಚಿಗೆ ಹೊಂದಿಕೊಂಡ ಅರಣ್ಯ ನೀತಿ ಕುರಿತು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ):–**

೨೭೯೦ (ಇಳ೭ಳ) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ವಿವಿಧ ನಗರಗಳಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು; ನಗರವಾರು ಅರಣ್ಯ ದರ್ಜೆ ಹಾಗೂ ವಿಸ್ತೀರ್ಣದ ವಿವರ ಒದಗಿಸುವುದು;

(ಆ) ರಾಜ್ಯದ ವಿವಿಧ ನಗರಗಳ ಅಂಚಿಗೆ ಹೊಂದಿಕೊಂಡಿರುವ ಅರಣ್ಯದ ವಿಸ್ತೀರ್ಣವೆಷ್ಟು; ನಗರವಾರು ಅರಣ್ಯ ದರ್ಜೆ ಹಾಗೂ ವಿಸ್ತೀರ್ಣದ ವಿವರ ಒದಗಿಸುವುದು;

(ಇ) ಸದರಿ ಅರಣ್ಯದಲ್ಲಿ ಇಲಾಖೆ ನಡೆಸುತ್ತಿರುವ ಕಾರ್ಯ ಚಟುವಟಿಕೆಗಳೇನು;

(ಈ) ನಗರಗಳಲ್ಲಿರುವ ಅರಣ್ಯ ಪ್ರದೇಶದ ಅಭಿವೃದ್ಧಿಯನ್ನು ಇಲಾಖೆ ಯಾವ ರೀತಿ ಗುರುತಿಸುತ್ತದೆ; ನಗರವಾರು ವಿವರ ಒದಗಿಸುವುದು;

(ಉ) ಸದರಿ ಅರಣ್ಯದ ವಿಸ್ತೀರ್ಣದಲ್ಲಿ ಕಾಣಿಯಾಗಿರುವ, ಒತ್ತುವರಿಯಾಗಿರುವ ವಿವರಗಳನ್ನು ನಗರವಾರು ವಿವರ ಒದಗಿಸುವುದು;

(ಊ) ಸದರಿ ಅರಣ್ಯ ಕಾಯ್ದುಕೊಳ್ಳುವಿಕೆಗೆ ಇಲಾಖೆ ಮುಂದೆ ಇರುವ ಸವಾಲು–ಸಮಸ್ಯೆಗಳೇನು?

## ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಭ್ರಷ್ಟಚಾರ ನಡೆದಿರುವ ಕುರಿತು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ):–**

೨೬೧ (೩೪೪೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ KRDCL ಸಂಸ್ಥೆ ಕೆಂಗೇರಿ ಬಳಿ ನಿರ್ಮಿಸಿರುವ ಗ್ರೇಡ್ ಸಪರೇಟರ್‌ಗಾಗಿ ನಡೆಸಿದ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಕೆಲವು ಭೂ ಮಾಲೀಕರೊಂದಿಗೆ ಭೂಸ್ವಾಧೀನ

ಅಧಿಕಾರಿಗಳು ಶಾಮೀಲಾಗಿ ಅಕ್ರಮವಾಗಿ ಭೂ ಪರಿಹಾರ ವಿತರಿಸಿರುವ ಪ್ರಕರಣವನ್ನು ಗುರುತಿಸಿ ಶಿಕ್ಷಿಸಲು CID ಅಥವಾ ಇನ್ನಿತರ ತನಿಖಾ ಸಂಸ್ಥೆಗೆ ವಹಿಸುವುದೇ;

(ಆ) ಇಲ್ಲದಿದ್ದಲ್ಲಿ, ಕಂದಾಯ ಇಲಾಖೆಯ ಭೂಸ್ವಾಧೀನ ಅಧಿಕಾರಿಗಳು ಯಾವುದೇ ನಿಯಂತ್ರಣವಿಲ್ಲದೆ ಸರ್ಕಾರಕ್ಕೆ ವಂಚಿಸುವುದನ್ನು ತಡೆಗಟ್ಟಲು ಸರ್ಕಾರದ ಇತರ ಕ್ರಮಗಳೇನು?

## R.T.C ಯಲ್ಲಿ ದುರಸ್ತಿಗೊಳಿಸುವುದರಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ):–**

೨೭೨ (೩೪೪೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–

(ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ R.T.C ದುರಸ್ತಿಗಾಗಿ ಪ್ರಸ್ತುತ ಎಷ್ಟು ಅರ್ಜಿಗಳು ಬಾಕಿ ಇದೆ;

(ಆ) ೨೦೧೪–೧೫ ಮತ್ತು ೨೦೧೫–೧೬ರಲ್ಲಿ ಸ್ಥಳ ಪರಿಶೀಲನೆ ನಡೆಸದೆ ದುರಸ್ತಿ ಮಾಡಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಇದಕ್ಕೆ ಕಾರಣಗಳೇನು;

(ಇ) R.T.C ದುರಸ್ತಿ ಮಾಡುವಲ್ಲಿ ದೊಡ್ಡ ಪ್ರಮಾಣದ ಭ್ರಷ್ಟಚಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕ್ರಮಗಳೇನು;

(ಈ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ರೀತಿಯ ಎಚ್ಚರಿಕಾ ಕ್ರಮಗಳನ್ನು ಕೈಗೊಳ್ಳುತ್ತದೆ;

(ಉ) R.T.C ದುರಸ್ತಿಯ ಅಕ್ರಮದಿಂದಾಗಿ ನೈಜ ಜಮೀನಿನ ಮಾಲೀಕರು ಕೋರ್ಟಿಗೆ ಅಲೆದಾಡುವುದನ್ನು ತಪ್ಪಿಸಲು ಸರ್ಕಾರದ ಕ್ರಮಗಳೇನು?

## ಮೀನುಗಾರಿಕೆ ಕ್ಷೇತ್ರದ ಅಭಿವೃದ್ಧಿ ಪಡಿಸುವ ಕುರಿತು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ):–**

೨೭೯೩ (೩೪೫೪) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸಮುದ್ರ ಹಾಗೂ ಒಳನಾಡು ಮೀನುಗಾರಿಕೆ ಪ್ರಮಾಣವೆಷ್ಟು; ಇದರ ಗರಿಷ್ಠ Potential ಎಷ್ಟಿದೆ; ಈ ಪ್ರಮಾಣ ತಲುಪಲು ಇರುವ ಸಮಸ್ಯೆಗಳೇನು; ಇದನ್ನು ಪರಿಹರಿಸಲು ಅಗತ್ಯವಿರುವ ಅಂಶಗಳೇನು ಈ ಬಗ್ಗೆ ಸರ್ಕಾರ ಅನುಸರಿಸುತ್ತಿರುವ ಕ್ರಮಗಳೇನು;

(ಆ) ಮೀನುಗಾರಿಕೆಯಿಂದ ಗಳಿಕೆಯಾಗುವ ವಿದೇಶಿ ವಿನಿಮಯದ ಪ್ರಮಾಣವೆಷ್ಟು; ಇದನ್ನು ಹೆಚ್ಚು ಮಾಡಲು ಅಗತ್ಯವಿರುವ ಅಂಶಗಳೇನು; ಈ ಬಗ್ಗೆ ಸರ್ಕಾರದ ಪ್ರಯತ್ನಗಳೇನು;

(ಇ) ಮೀನುಗಾರರ ಸ್ಥಿತಿ–ಗತಿ ಬಗ್ಗೆ ಸರ್ಕಾರ ಕಾಲ–ಕಾಲಕ್ಕೆ ಯಾವ ರೀತಿ ಅಧ್ಯಯನ ಕೈಗೊಂಡಿದೆ; ಸುದಾರಣೆಗಾಗಿ ಸರ್ಕಾರ ಕೈಗೊಂಡಿರುವ ಅಂಶಗಳೇನು?

## ಗುತ್ತಿಗೆ ಕಾರ್ಮಿಕರ ಸ್ಥಿತಿಗತಿ ಬಗ್ಗೆ

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ):–**

೨೭೯೪ (೩೪೫೪) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗುತ್ತಿಗೆ ಕಾರ್ಮಿಕ ವ್ಯವಸ್ಥೆ ಯಾವ ಕಾನೂನಿನ ಅಡಿಯಲ್ಲಿ ರೂಪುಗೊಂಡಿದೆ;

(ಆ) ಇದು ಮಾನವೀಯ ಅಂಶಗಳನ್ನು ಹೊಂದಿದೆಯೇ; ಹಾಗಿದ್ದಲ್ಲಿ, ವಿವರಣೆ ಒದಗಿಸುವುದು;

(ಇ) ರಾಜ್ಯದಲ್ಲಿ ಗುತ್ತಿಗೆ ಕಾರ್ಮಿಕರ ಅಂದಾಜು ಸಂಖ್ಯೆ ಎಷ್ಟು;

(ಈ) ಗುತ್ತಿಗೆ ಕಾರ್ಮಿಕ ವ್ಯವಸ್ಥೆ ಮಾನವ ಹಕ್ಕುಗಳ ಉಲ್ಲಂಘನೆ ಎಂಬ ಕೂಗು ಕೇಳಿ ಬರುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ಅಭಿಪ್ರಾಯವೇನು;

(ಉ) ಈ ವ್ಯವಸ್ಥೆಯನ್ನು ಮಾನವೀಯಕರಣಗೊಳಿಸಲು ಕೇಂದ್ರ ಹಾಗೂ ಇತರ ಸರ್ಕಾರಗಳೊಂದಿಗೆ ಚರ್ಚಿಸಿ ಸುಧಾರಿಸಲು ಸರ್ಕಾರದ ಪ್ರಯತ್ನಗಳೇನು?

## ಎ.ಐ.ಬಿ.ಪಿ ಯೋಜನೆಯ ಅನುದಾನದ ಬಗ್ಗೆ

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೭೯೫ (೩೪೫೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಎ.ಐ.ಬಿ.ಪಿ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಲುವೆಗಳ ಆಧುನೀಕರಣಕ್ಕಾಗಿ ಮಂಜೂರು ಮಾಡಿರುವ ಅನುದಾನ ಎಷ್ಟು; ಈ ಯೋಜನೆಯ ಸಮಗ್ರ ಮಾಹಿತಿ ನೀಡುವುದು;

(ಆ) ಯಾವ ಯಾವ ಕಾಲುವೆಗಳನ್ನು ಆಧುನೀಕರಣಗೊಳಿಸಲು ಉದ್ದೇಶಿಸಲಾಗಿದೆ; (ವಿವರ ನೀಡುವುದು)

(ಇ) ಈ ಯೋಜನೆಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು; ಇಲ್ಲಿಯವರೆಗೂ ಆಗಿರುವ ಖರ್ಚು ಎಷ್ಟು; ಇನ್ನೂ ಕೇಂದ್ರದಿಂದ ಬಿಡುಗಡೆಯಾಗಬೇಕಾಗಿರುವ ಅನುದಾನ ಎಷ್ಟು?

## ಕಾರ್ಮಿಕ ಇಲಾಖೆಯು ಜ್ಯೂನಿಯರ್ ಟ್ರೈನಿಂಗ್ ಆಫೀಸರ್‌ಗಳ ಸೇವಾ ಅವಧಿ ಘೋಷಣೆ ಬಗ್ಗೆ

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೭೯೬ (ಌ೪೫೧) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾರ್ಮಿಕ ಇಲಾಖೆ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ೨೦೧೦ರಲ್ಲಿ ನೇಮಕಗೊಂಡ K.P.S.C 410 J.T.O (ಜ್ಯೂನಿಯರ್ ಟ್ರೈನಿಂಗ್ ಆಫೀಸರ್)ಗಳ ಸೇವಾ ಪೂರ್ವ ಅವಧಿ ಘೋಷಣೆ ಆಗಿದೆಯೇ; ಇಲ್ಲದಿದ್ದಲ್ಲಿ ಸೇವಾ ಪೂರ್ವ ಅವಧಿ ಘೋಷಣೆ ವಿಳಂಬ ಏಕೆ;

(ಆ) ಸೇವಾ ಪೂರ್ವ ಅವಧಿಯುನ್ನು ಯಾವಾಗ ಘೋಷಣೆ ಮಾಡಲಾಗುವುದು? (ವಿವರ ನೀಡುವುದು)

## ಕಲಬುರಗಿ ಜಿಲ್ಲೆಯ ಬೆಣ್ಣೆತೊರೆ ಅಮರ್ಜಾ ಕೆಳದಂಡೆ ಮುಲ್ಲಾಮಾರಿ ಯೋಜನೆಗಳ ಬಗ್ಗೆ.

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೭೯೭ (ಌ೪೪೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಜಿಲ್ಲೆಯ ಬೆಣ್ಣೆತೊರೆ, ಅಮರ್ಜಾ ಕೆಳದಂಡೆ ಮುಲ್ಲಾಮಾರಿ ಯೋಜನೆಗಳು ಆರಂಭವಾಗಿರುವುದು ಯಾವಾಗ;

(ಆ) ಈ ಯೋಜನೆಗಳಿಂದ ಎಷ್ಟು ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ದೊರೆಯಲಿದೆ; (ಯೋಜನೆವಾರು ವಿವರ ನೀಡುವುದು)

(ಇ) ಈ ಯೋಜನೆಗಳನ್ನು ಕೈಗೆತ್ತಿಗೊಂಡಾಗ ಅವುಗಳ ಅಂದಾಜು ಮೊತ್ತ ಎಷ್ಟಿತ್ತು; ಈಗಾಗಲೇ ಖರ್ಚಾಗಿರುವ ಹಣ ಎಷ್ಟು; ಪೂರ್ಣಗೊಳಿಸಲು ಇನ್ನೂ ಬೇಕಾಗಿರುವ ಅನುದಾನ ಎಷ್ಟು; (ಯೋಜನಾವಾರು ಮಾಹಿತಿ ನೀಡುವುದು)

(ಈ) ಈ ಮೂರು ಯೋಜನೆಗಳನ್ನು ಪೂರ್ಣಗೊಳಿಸಲು ಕಾಲಮಿತಿಯನ್ನು ರೂಪಿಸಲಾಗಿದೆಯೇ? (ಮಾಹಿತಿ ಒದಗಿಸುವುದು)

## ಕಲಬುರಗಿ ಜಿಲ್ಲೆಯಲ್ಲಿ ಸ್ಥಾಪಿಸಲಾಗಿರುವ K.G.T.T.I ಬಗ್ಗೆ

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೭೯೮ (೩೪೫೨) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಜಿಲ್ಲೆಯಲ್ಲಿ ಸ್ಥಾಪಿಸಲಾಗಿರುವ K.G.T.T.I (ಕರ್ನಾಟಕ ಜರ್ಮನ್ ಟ್ರೈನಿಂಗ್ ಇನ್ಸ್ಟಿಟ್ಯೂಟ್‌ನ) ಸ್ವಂತ ಕಟ್ಟಡ ಕಾಮಗಾರಿ ಸದ್ಯ ಯಾವ ಹಂತದಲ್ಲಿದೆ;

(ಆ) ಈ ಸಂಸ್ಥೆಗೆ ತರಬೇತಿ ಪಡೆಯಲು ಬರುವ ವಿದ್ಯಾರ್ಥಿಗಳಿಗಾಗಿ ನಿರ್ಮಾಣವಾಗುತ್ತಿರುವ ಹಾಸ್ಟಲ್ ಕಟ್ಟಡ ಯಾವ ಹಂತದಲ್ಲಿದೆ; ಇದು ಯಾವಾಗ ಪೂರ್ಣಗೊಳ್ಳುವುದು;

(ಇ) ಈ ಕಟ್ಟಡ ಕಾಮಗಾರಿಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು?

## ಬಳ್ಳಾರಿ ನಗರದ ಮೃಗಾಲಯದಲ್ಲಿರುವ ಪ್ರಾಣಿ ಪಕ್ಷಿಗಳ ಕುರಿತು

**ಶ್ರೀ ಮೃತ್ಯಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೭೯೯ (೩೫೮೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಳ್ಳಾರಿ ನಗರದ ಮೃಗಾಲಯದಲ್ಲಿರುವ ಪ್ರಾಣಿ, ಪಕ್ಷಿಗಳ ಸಂಖ್ಯೆ ಎಷ್ಟು; ಅವುಗಳು ಯಾವುವು;

(ಆ) ಈ ಮೃಗಾಲಯದಲ್ಲಿರುವ ನೌಕರರ ಸಂಖ್ಯೆ ಎಷ್ಟು; (ವೃಂದವಾರು ವಿವರ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ಈ ಮೃಗಾಲಯದ ನಿರ್ವಹಣೆಗೆ ನೀಡಲಾದ ಮೊತ್ತವೆಷ್ಟು; (ವರ್ಷವಾರು ವಿವರ ನೀಡುವುದು)

(ಈ) ಈ ಮೃಗಾಲಯಕ್ಕೆ ಕಳೆದ ಮೂರು ವರ್ಷಗಳಲ್ಲಿ ಭೇಟಿ ನೀಡಿದ ಸಾರ್ವಜನಿಕರ ಸಂಖ್ಯೆ ಎಷ್ಟು; ಅವರಿಂದ ಸಂಗ್ರಹಿಸಲಾದ ಪ್ರವೇಶ ಶುಲ್ಕವೆಷ್ಟು?

## TB Board ವಶದಲ್ಲಿರುವ ಭೂಮಿಯನ್ನು ರಾಜ್ಯ ಸರ್ಕಾರ ವಶಪಡಿಸಿಕೊಳ್ಳುವ ಬಗ್ಗೆ

**ಶ್ರೀ ಮೃತ್ಯಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೮೦೦ (೩೪೫೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುಂಗಭದ್ರಾ ಮಂಡಳಿ ವ್ಯಾಪ್ತಿಯಲ್ಲಿರುವ ನಿಶಾಗಿ ಕ್ಯಾಂಪ್, ವಂಕಾ ಕ್ಯಾಂಪ್ ಪಿ.ಎಲ್.ಸಿ ಕ್ಯಾಂಪ್ ಇ.ವಿ. ಕ್ಯಾಂಪ್ ಪ್ರೆಸೆಕ್ಯಾಂಪ್ ಮತ್ತು ಹಳೆಯ ಅಮರಾವತಿ ಕಾಲೋನಿ ಪ್ರದೇಶಗಳ ಭೂಮಿ TB ಬೋರ್ಡ್‌ಗೆ ಸಂಬಂಧಿಸಿದ್ದೇವುಗಳೇನು;

(ಆ) ಈ ಭೂ ಪ್ರದೇಶದ ವ್ಯಾಪ್ತಿಯ ಕ್ಯಾಂಪ್ ಮತ್ತು ಕಾಲೋನಿಯಲ್ಲಿ ವಾಸಿಸುವ ಜನರಿಗೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ; ಒದಗಿಸಿದ್ದಲ್ಲಿ, ಏನೇನು ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. (ವಿವರ ನೀಡುವುದು)

(ಇ) ಈ ಪ್ರದೇಶದಲ್ಲಿರುವ ಭೂಮಿಯ ಸಮಗ್ರ ಅಭಿವೃದ್ಧಿಗಾಗಿ TB Board ವಶದಲ್ಲಿರುವ ಭೂಮಿಯನ್ನು ಕರ್ನಾಟಕ ರಾಜ್ಯ ಸರ್ಕಾರ ಹಸ್ತಾಂತರಿಸಿಕೊಳ್ಳುವುದೇ?

(ಈ) ಈಗಾಗಲೇ TB Board ವಶದಲ್ಲಿರುವ ಎಷ್ಟು ಭೂಮಿಯನ್ನು ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸಲಾಗಿದೆ;

(ಉ) ಉಳಿದ ಭೂಮಿಯನ್ನು ರಾಜ್ಯ ಸರ್ಕಾರ ಶೀಘ್ರದಲ್ಲಿ ಹಸ್ತಾಂತರಿಸಿಕೊಳ್ಳಲು ಕ್ರಮ ಕೈಗೊಳ್ಳುವುದೇ?

## ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ಕ್ರೀಡಾ ವಸತಿ ನಿಲಯ ಸ್ಥಾಪಿಸುವ ಕುರಿತು

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೮೦೧ (ಇಶಿ೧೮) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಕ್ರೀಡಾ ವಸತಿ ನಿಲಯಗಳೆಷ್ಟು; ಅವು ಎಲ್ಲೆಲ್ಲಿ ಇವೆ;

(ಆ) ಈ ಕ್ರೀಡಾ ವಸತಿ ನಿಲಯುಗಳಲ್ಲಿ ತರಬೇತಿ ಪಡೆದ ಎಷ್ಟು ಕ್ರೀಡಾಪಟುಗಳು ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟೀಯ ಕ್ರೀಡೆಗಳಲ್ಲಿ ಸಾಧನೆ ಮಾಡಿದ್ದಾರೆ; (ವಿವರ ನೀಡುವುದು)

(ಇ) ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ಎಷ್ಟು ಕ್ರೀಡಾ ವಸತಿ ನಿಲಯಗಳಿವೆ; ಯಾವ ಯಾವ ಸ್ಥಳಗಳಲ್ಲಿವೆ;

(ಈ) ಈ ಭಾಗದಲ್ಲಿ ಹೊಸದಾಗಿ ಕ್ರೀಡಾ ವಸತಿ ನಿಲಯ ಸ್ಥಾಪಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

## ಉಡುಪಿ ಜಿಲ್ಲೆಯಲ್ಲಿ ಕಸ್ತೂರಿರಂಗನ್ ವರದಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೮೦೨ (೩೪೬೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉಡುಪಿ ಜಿಲ್ಲೆಯಲ್ಲಿ ಕಸ್ತೂರಿರಂಗನ್ ವರದಿಯ ವ್ಯಾಪ್ತಿಗೆ ಒಳಪಡುವ ಗ್ರಾಮಗಳು ಯಾವುವು; ಮತ್ತು ಆ ಗ್ರಾಮಗಳಲ್ಲಿ ಕಸ್ತೂರಿ ರಂಗನ್ ವರದಿಯ ವ್ಯಾಪ್ತಿಗೆ ಒಳಪಡುವ ವಿಸ್ತೀರ್ಣವೆಷ್ಟು; (ಗ್ರಾಮವಾರು, ಸರ್ವೆನಂಬರ್‌ವಾರು ವಿವರ ನೀಡುವುದು)

(ಆ) ಮಾಹಿತಿಯ ಕೊರತೆಯಿಂದಾಗಿ ಕಸ್ತೂರಿರಂಗನ್ ವರದಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ಗ್ರಾಮಸ್ಥರು ಹಾಗೂ ರೈತರು ಅನಿಶ್ಚಿತತೆಯಿಂದ ಗೊಂದಲಕ್ಕೊಳಗಾಗಿರುವುದನ್ನು ಸರ್ಕಾರ ಗಮನಿಸಿದೆಯೇ; ಅದನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದೇ;

(ಇ) ಕಸ್ತೂರಿರಂಗನ್ ವರದಿಯಲ್ಲಿ ಕೆಲವೊಂದು ಸಡಲೀಕರಣಕ್ಕೆ ರಾಜ್ಯ ಸರ್ಕಾರದ ಯಥಾರ್ಥ ಕ್ರಮಗಳ ಮುಂದುವರಿಕೆಯನ್ನು ಕೇಂದ್ರ ಸರ್ಕಾರ ಒಪ್ಪದೆ ಇರಲು ಕಾರಣವೇನು; ಅಥವಾ ಕೇಂದ್ರ ಸರ್ಕಾರಕ್ಕೆ ನಿಖರವಾದ ಮನವರಿಕೆಯನ್ನು ಮಾಡಲು ರಾಜ್ಯ ಸರ್ಕಾರ ವಿಫಲವಾಗಿದೆಯೇ?

## ರಾಜ್ಯದಲ್ಲಿ ಪಹಣಿ ಪತ್ರಗಳ ವಿತರಣೆಯಲ್ಲಾಗುತ್ತಿರುವ ತೊಂದರೆ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೮೦೩ (೩೪೫೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಪಹಣಿ ಪತ್ರಗಳನ್ನು ಗ್ರಾಮ ಪಂಚಾಯತ್‌ಗಳ ಮುಖಾಂತರ ವಿತರಿಸುವ ಭರವಸೆಯನ್ನು ಈ ತನಕ ಈಡೇರಿಸದಿರಲು ಕಾರಣವೇನು;

(ಆ) ಉಡುಪಿ ಜಿಲ್ಲೆಯಲ್ಲಿ ಪಹಣಿ ಪತ್ರಗಳ ವಿತರಣೆಯಲ್ಲಿ ಸ್ವೇಚ್ಛಾಚಾರದ ತೀರ್ಪಿನಿಂದಾಗಿ ರೈತರು ಹಾಗೂ ಸಾರ್ವಜನಿಕರು ಕಿರುಕುಳವನ್ನು ಅನುಭವಿಸುತ್ತಿರುವುದು ಸರ್ಕಾರ ಗಮನಿಸಿದೆಯೇ;

(ಇ) ಉಡುಪಿ ಜಿಲ್ಲೆಯಲ್ಲಿ ನೆಮ್ಮದಿ ಕೇಂದ್ರಕ್ಕೆ ದೂರದಿಂದ ಬಂದು ಪಹಣಿ ಪತ್ರ ಕೋರುವ ರೈತರು ಹಾಗೂ ಸಾರ್ವಜನಿಕರಿಗೆ ಟೋಕನ್ ನೀಡುವುದು, ಟೋಕನ್ ನೀಡದೆ ವಾಪಸ್ಸು ಕಳುಹಿಸುವುದು ಹಾಗೂ ಪಹಣಿ ಪತ್ರಗಳನ್ನು ನೀಡಲು ಒಂದೇ ಗಣಕಯಂತ್ರ ಇರುವುದರಿಂದ ರೈತರು ಹಾಗೂ ಸಾರ್ವಜನಿಕರಿಗಾಗುತ್ತಿರುವ ಅನಾನುಕೂಲತೆಯನ್ನು ಸರ್ಕಾರ ಗಮನಿಸಿದೆಯೇ; ಗಮನಿಸಿದಲ್ಲಿ ಇದನ್ನು ಸರಿಪಡಿಸಲು ಕೈಗೊಳ್ಳಲಾಗುವ ಕ್ರಮವೇನು?

## ವರಾಹಿ ನೀರಾವರಿ ಯೋಜನೆಯ ಕಾಮಗಾರಿಗಳನ್ನು ಕಾಲಮಿತಿಯೊಂದಿಗೆ ಪೂರ್ಣಗೊಳಿಸುವ ಕುರಿತು.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೨೮೦೪ (೩೪೫೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಪ್ರಾರಂಭವಾಗಿರುವ ಏಕೈಕ ನೀರಾವರಿ ಯೋಜನೆಯಾದ ವರಾಹಿ ನೀರಾವರಿ ಯೋಜನೆಯ ಎಡದಂಡೆ ಮತ್ತು ಬಲದಂಡೆ ಕಾಲುವೆ ಹಾಗೂ ಏತನೀರಾವರಿಯ ಕಾಮಗಾರಿಯನ್ನು ಎಂದು ಪೂರ್ಣಗೊಳಿಸಲಾಗುವುದು; ಮತ್ತು ಅದಕ್ಕೆ ತಗಲುವ ಒಟ್ಟು ವೆಚ್ಚವೆಷ್ಟು;

(ಆ) ವರಾಹಿ ನೀರಾವರಿ ಯೋಜನೆಯ ಎಡದಂಡೆ, ಬಲದಂಡೆ ಮತ್ತು ಏತನೀರಾವರಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಮಿತಿ ನಿಗಧಿ ಪಡಿಸಲಾಗಿದೆಯೇ; ಕಾಲಮಿತಿ ನಿಗಧಿಪಡಿಸಿದಲ್ಲಿ ಎಂದು ಪೂರ್ಣಗೊಳಿಸಲಾಗುವುದು;

(ಇ) ರೈತರ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿ ವೆಚ್ಚಮಾಡಿ ನಿರ್ಮಿಸಲಾದ ವರಾಹಿ ಏತ ನೀರಾವರಿ ಯೋಜನೆಯು ಪೂರ್ಣ ಪ್ರಮಾಣದಲ್ಲಿ ರೈತರಿಗೆ ಬಳಕೆಯಾಗುವಂತೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

## ವರಾಹಿ ನೀರಾವರಿ ಯೋಜನೆಯ ಏತನೀರಾವರಿ ಪಂಪುಗಳಿಗೆ ಪಾವತಿಸಲಾದ ವಿದ್ಯುತ್ ಬಿಲ್ಲಿನ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೮೦೫ (೩೪೬೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ನೀರಾವರಿ ನಿಗಮದಿಂದ ನಿರ್ವಹಿಸಲ್ಪಡುತ್ತಿರುವ ವರಾಹಿ ನೀರಾವರಿ ಯೋಜನೆಯ ಏತನೀರಾವರಿಯ ಪಂಪುಗಳಿಗೆ ಏಪ್ರಿಲ್–೨೦೧೫ರಿಂದ ಇಲ್ಲಿಯ ತನಕ ಪಾವತಿಸಲಾದ ವಿದ್ಯುತ್ ಬಿಲ್ಲಿನ ಮೊತ್ತವೆಷ್ಟು; (ಮಾಸಿಕವಾರು ವಿವರ ನೀಡುವುದು)

(ಆ) ವರಾಹಿ ನೀರಾವರಿ ಯೋಜನೆಯ ಏತ ನೀರಾವರಿಯ ಪಂಪುಗಳ ವಿದ್ಯುತ್ ಸಂಪರ್ಕದ ಕಡಿತಕ್ಕೆ ಮೆಸ್ಕಾಂ ಇಲಾಖೆಗೆ ಮನವಿ ಸಲ್ಲಿಸಲಾಗಿದೆಯೇ; ಇಲ್ಲವಾದಲ್ಲಿ ಕಾರಣವೇನು; ವಿದ್ಯುತ್ ಸಂಪರ್ಕದ ಕಡಿತಕ್ಕೆ ಮನವಿ ಸಲ್ಲಿಸಿದಲ್ಲಿ ಯಾವ ದಿನಾಂಕದಂದು ಸಲ್ಲಿಸಲಾಗಿದೆ?

## ರಾಜ್ಯದಲ್ಲಿ ಕಾಗದ ರಹಿತವಾಗಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೮೦೬ (೩೪೬೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಾಗದ ರಹಿತವಾಗಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಕೇಂದ್ರಗಳಾವುವು; ಮತ್ತು ತಾಲ್ಲೂಕು ಕೇಂದ್ರಗಳಾವುವು;

(ಆ) ರಾಜ್ಯದಲ್ಲಿ ಕಂದಾಯ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆಯಿಂದಾಗಿ ಕಾಗದ ರಹಿತ ಕಛೇರಿಗಳಾಗಿ ಮಾಡಲಾಗದಿರುವುದು ಎಂಬುದನ್ನು ಸರ್ಕಾರ ಗಮನಿಸಿದೆಯೇ; ಇದ್ದಲ್ಲಿ, ಏನು ತುರ್ತು ಕ್ರಮಗಳನ್ನು ಕೈಗೊಳ್ಳಲಾಗುವುದು;

(ಇ) ಕಚೇರಿಗಳು ಕಾಗದ ರಹಿತವಾಗಿದ್ದರೆ ಪಾರದರ್ಶಕವಾಗಿರುವುದೇ ಮತ್ತು ಮಾಹಿತಿ ಹಕ್ಕು ಕಾಯ್ದೆಯ ವ್ಯಾಪ್ತಿಗೆ ಒಳಪಡುವುದೇ; ಇಲ್ಲವಾದಲ್ಲಿ, ಕಚೇರಿಗಳು ಪಾರದರ್ಶಕವಾಗಿರಲು ಕ್ರಮ ಕೈಗೊಳ್ಳಲಾಗುವುದೇ?

## ನೀರಾವರಿ ನೀತಿ *(Water Policy)*ಯ ವಿವರಗಳ ಬಗ್ಗೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ ):–**

೨೮೦೭ (೩೪೬೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ನೀರಾವರಿ ನೀತಿ (Water Policy) ಇದೆಯೇ ; ಇದ್ದರೆ ವಿವರಗಳನ್ನು ನೀಡುವುದು ;

(ಆ) ರಾಜ್ಯದಲ್ಲಿ ಇದುವರೆವಿಗೂ ವಾಟರ್ ಬಡ್ಜೆಟ್ (Water Budget) ಅನಾಲಸಿಸ್ ಆಗಿದ್ದರೆ ಅದರ ವಿವರಗಳನ್ನು ತಿಳಿಸುವುದು ;

(ಇ) ರಾಜ್ಯದಲ್ಲಿ ಸರ್ಕಾರಗಳು ಇದುವರೆವಿಗೂ ವಾಟರ್ ಆಡಿಟ್ (Water Audit) ಬಗ್ಗೆ ಗಮನಹರಿಸಿವೆಯೇ ; ಇದ್ದರೆ ವಿವರಗಳನ್ನು ತಿಳಿಸುವುದು?

## ೨೦೧೪–೧೫ ಮತ್ತು ೨೦೧೫–೧೬ರ ಆಯವ್ಯಯದ ಬಗ್ಗೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–**

೨೮೦೮ (೩೪೬೯) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫ ಹಾಗೂ ೨೦೧೫–೧೬ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಯ ಆಯವ್ಯಯ (Budget) ಎಷ್ಟು ;

(ಆ) ಸದರಿ ಇಲಾಖೆಯಿಂದ ಕೈಗೆತ್ತಿಕೊಂಡಿರುವ ದೊಡ್ಡ ಯೋಜನೆಗಳು ಯಾವುವು ;

(ಇ) ಸದರಿ ಇಲಾಖೆಯಲ್ಲಿ ಈ ಅವಧಿಯಲ್ಲಿ ರೂ. ೫.೦೦ ಲಕ್ಷ ಮತ್ತು ಅದಕ್ಕಿಂತ ಕಡಿಮೆ ಮೊತ್ತದಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಯಾವುವು ; (ವಿವರಗಳನ್ನು ತಾಲ್ಲೂಕುವಾರು ನೀಡುವುದು)

(ಈ) ಇಂತಹ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಇಲಾಖೆಯ ದೂರದೃಷ್ಟಿ ಏನು ; ಇದರಲ್ಲಿ ಆಗಿರುವ ಅವ್ಯವಹಾರಗಳ ವಿವರಗಳನ್ನು ನೀಡುವುದು?

## ಆರ್.ಟಿ.ಸಿ. ೧೧ಇ ಸ್ಕೆಚ್ ಮತ್ತು ಮ್ಯುಟೇಷನ್ ಮುಂತಾದ ದಾಖಲೆಗಳ ವಿಳಂಬದ ಬಗ್ಗೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–**

೨೮೦೯ (೩೪೬೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ತಹಶೀಲ್ದಾರ್‌ರವರ ಕಛೇರಿಗಳಲ್ಲಿ ಪಹಣಿ (ಆರ್.ಟಿ.ಸಿ.)೧೧ಇ ಸ್ಕೆಚ್, ಮ್ಯುಟೇಷನ್ ಮುಂತಾದ ಅತ್ಯಾವಶ್ಯಕ ದಾಖಲಾತಿಗಳಿಗಾಗಿ ಜನಸಾಮಾನ್ಯರು ತಿಂಗಳಾನುಗಟ್ಟಲೆ ಕಾದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಇದಕ್ಕೆ ಕಾರಣ ಏನು ಹಾಗೂ ಇದನ್ನು ಯಾವಾಗ ಪರಿಹಾರ ಮಾಡಲಾಗುವುದು ;

(ಇ) ಈ ರಾಜ್ಯದಲ್ಲಿ ಬಾಕಿ ಇರುವ ಪೋಡಿ, ೧೧ಇ ಸ್ಕೆಚ್, ಮ್ಯುಟೇಷನ್ ಪ್ರಕರಣಗಳು ಎಷ್ಟು ? (ಜಿಲ್ಲಾವಾರು ವಿವರ ನೀಡುವುದು)

## ರಾಜ್ಯದಲ್ಲಿ ಶ್ರೀಗಂಧ ಬೆಳೆಯುವ ಪ್ರದೇಶದ ಬಗ್ಗೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ ):–**

೨೮೧೦ (ಇ೪೬೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಶ್ರೀಗಂಧ ಬೆಳೆಯುವ ಪ್ರದೇಶಗಳು ಯಾವುವು ; ಹಾಗೂ ಅಂದಾಜಿಸಿರುವ ಶ್ರೀಗಂಧದ ಪ್ರಮಾಣ ಎಷ್ಟು ; ಇದರ ಅಂದಾಜು ಮೊತ್ತ ಎಷ್ಟು ;

(ಆ) ಈ ಮರಗಳನ್ನು ರೈತರು ಬೆಳೆಯಲು ಇರುವ ತೊಂದರೆ ಏನು ;

(ಇ) ಇದರ ಬಗ್ಗೆ ನಿರ್ದಿಷ್ಟವಾದ ನೀತಿ ಸರ್ಕಾರದಲ್ಲಿ ಇದೆಯೇ ; ಇದ್ದರೆ ತಿಳಿಸುವುದು ;

(ಈ) ಶ್ರೀಗಂಧ ಕಳ್ಳತನದ ಬಗ್ಗೆ ಇದುವರೆವಿಗೂ ಇಲಾಖೆಯಲ್ಲಿ ಹಾಗೂ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳು ಎಷ್ಟು; ಅವು ಯಾವುವು ? (ವಿವರ ನೀಡುವುದು)

## ರಾಯಚೂರು ಜಿಲ್ಲೆಯಲ್ಲಿ ಬರುವ ಕಾರ್ಮಿಕರ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೨೮೧೧ (೩೫೦೮) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆಯ ಕಾರ್ಮಿಕರ ಸಂಖ್ಯೆ ಎಷ್ಟು ;

(ಆ) ಜಿಲ್ಲೆಯ ಕಾರ್ಮಿಕರ ಅಭಿವೃದ್ಧಿಗಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಕಾರ್ಮಿಕರ ಅನುಕೂಲಕ್ಕಾಗಿ ಆಸ್ಪತ್ರೆ, ಶಾಲೆ, ವಸತಿಗಾಗಿ ಕಟ್ಟಡ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

## ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನ ದದ್ದಲ, ಮಾದಲಪುರ ಏತ ನೀರಾವರಿ ಯೋಜನೆ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೨೮೧೨ (೩೫೦೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಾನ್ವಿ ತಾಲ್ಲೂಕಿನಲ್ಲಿ ಬರುವ ದದ್ದಲ ಹಾಗೂ ಮಾದಲಪುರ ಏತ ನೀರಾವರಿ ಯೋಜನೆ ಪೂರೈಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಕೃಷ್ಣಾ ನದಿ ಹಾಗೂ ತುಂಗಭದ್ರಾ ನದಿಗಳ ಮುಖಾಂತರ ರಾಯಚೂರು ತಾಲ್ಲೂಕಿನಲ್ಲಿ/ಜಿಲ್ಲೆಯಲ್ಲಿ ಕೆರೆಗಳನ್ನು ತುಂಬಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಮಾನ್ವಿ ಹಾಗೂ ರಾಯಚೂರು ತಾಲ್ಲೂಕುಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಸಮುದಾಯಕ್ಕೆ ಸೇರಿರುವ ಎಷ್ಟು ಜನ ರೈತರುಗಳಿಗೆ ಸೋಲಾರ ಪಂಪ್‌ಸೆಟ್‌ಗಳು ಮಂಜೂರಾತಿಯಾಗಿರುತ್ತವೆ ? (ಸಂಪೂರ್ಣ ವಿವರ ನೀಡುವುದು)

## ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನಲ್ಲಿ ಬರುವ ರಾಜಲಬಂಡಾ ಅಣೆಕಟ್ಟು ಅಭಿವೃದ್ಧಿ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೨೮೧೩ (೩೫೦೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಾನ್ವಿ ತಾಲ್ಲೂಕಿನಲ್ಲಿ ಬರುವ ರಾಜಲಬಂಡಾ (ಆರ್.ಡಿ.ಎಸ್.) ಅಣೆಕಟ್ಟನ್ನು ಅಭಿವೃದ್ಧಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ತುಂಗಭದ್ರಾ ನದಿ ಅಡ್ಡಲಾಗಿ ಮಾನ್ವಿ ತಾಲ್ಲೂಕಿನ ಬೆಕಲಪರ್ವಿ ಗ್ರಾಮದ ಹತ್ತಿರ ನಿರ್ಮಿಸಲು ಉದ್ದೇಶಿಸಿರುವ ಅಣೆಕಟ್ಟು ಪ್ರಸ್ತಾವನೆ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ತುಂಗಭದ್ರಾ ಎಡದಂಡೆ ಕಾಲುವೆಯ ಕೊನೆಯಭಾಗ ಮಾನ್ವಿ ಹಾಗೂ ರಾಯಚೂರು ತಾಲ್ಲೂಕುಗಳಲ್ಲಿ ರೈತರ ನೀರಿನ ಕೊರತೆ ನೀಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ರಾಯಚೂರು ಜಿಲ್ಲೆ ಮಾನ್ವಿ ಪಟ್ಟಣದಲ್ಲಿ ಮಿನಿ ವಿಧಾನಸೌಧ ನಿರ್ಮಿಸುವ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೨೮೧೪ (೩೩೫೨) ಮಾನ್ಯ ಕಂದಾಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ಮಾನ್ವಿ ಪಟ್ಟಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಮಿನಿ ವಿಧಾನಸೌಧದ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಅರಣ್ಯ ಅಭಿವೃದ್ಧಿಯಲ್ಲಿನ ಅಸಮತೋಲನ ನಿವಾರಣೆ ಕುರಿತು

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೮೧೫ (೩೫೭೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅರಣ್ಯ ಅಭಿವೃದ್ಧಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿನ ಮುಂದುವರೆದ ಮತ್ತು ಹಿಂದುಳಿದ ತಾಲ್ಲೂಕುಗಳ ನಡುವಣ "ಅಸಮತೋಲನ"ವನ್ನು ಸರಿದೂಗಿಸಲು ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಆ) ಈ ಬಗ್ಗೆ ಡಾ॥ ಡಿ.ಎಂ. ನಂಜುಂಡಪ್ಪರವರ ವರದಿಯಲ್ಲಿನ ಶಿಫಾರಸ್ಸುಗಳೇನು ;

(ಇ) ಸದರಿ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲಾಗುತ್ತದೆಯೇ ?

## ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳನ್ನು ನಿಯಂತ್ರಿಸುವ ಬಗ್ಗೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೮೧೬ (೩೫೧೨) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ದೌರ್ಜನ್ಯಗಳನ್ನು ನಿಯಂತ್ರಿಸಿ, ಮಹಿಳೆಯರಿಗೆ ಹೆಚ್ಚಿನ ಸಾಮಾಜಿಕ ಭದ್ರತೆ ಒದಗಿಸಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ;

(ಇ) ಮಹಿಳಾ ಕಾರ್ಮಿಕರನ್ನು ಸಬಲೀಕರಣಗೊಳಿಸಲು ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳಾವುವು ?

## ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಕುರಿತು

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೮೧೭ (೩೫೧೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪರಿಸರ ಅಭಿವೃದ್ಧಿ ದೃಷ್ಟಿಯಿಂದ ಸರ್ಕಾರಿ ಸಂಸ್ಥೆಗಳು (ಕೆ.ಎಸ್.ಟಿ.ಡಿ.ಸಿ) ಆಯೋಜಿಸುವ ವಿವಿಧ ಪ್ರವಾಸಗಳಲ್ಲಿ ಭಾಗವಹಿಸುವ ಪ್ರವಾಸಿಗರನ್ನು ಪ್ರೇರೇಪಿಸಿ ಅವರು ಭೇಟಿ ನೀಡುವ ಪ್ರವಾಸಿ ಕೇಂದ್ರಗಳ ನಿರ್ದಿಷ್ಟ ಸ್ಥಳಗಳಲ್ಲಿ ಸಸಿಗಳನ್ನು ನೆಡುವ ಕಾರ್ಯಕ್ರಮಗಳನ್ನು ರೂಪಿಸಲಾಗುವುದೇ ;

(ಆ) ಅದೇ ರೀತಿ ಪ್ರವಾಸಿಗರು ಮಳೆಗಾಲದಲ್ಲಿ ಭೇಟಿ ನೀಡುವ ಅರಣ್ಯ ಮತ್ತು ಘಟ್ಟ ಪ್ರದೇಶಗಳಲ್ಲಿ ಬೀಜ ಪ್ರಸರಣ ಮಾಡುವ ಮೂಲಕ ಪರಿಸರ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಲು ಪ್ರೇರೇಪಿಸಲಾಗುವುದೇ ;

(ಇ) ಶೈಕ್ಷಣಿಕ ಪ್ರವಾಸಗಳಲ್ಲಿ ಮಕ್ಕಳು ಹೆಚ್ಚಾಗಿ ಸಸಿಗಳನ್ನು ನೆಡಲು ಉತ್ತೇಜಿಸಲಾಗುವುದೇ ?

## ಕನಿಷ್ಠ ವೇತನ ಕಾಯ್ದೆ ಜಾರಿಗೊಳಿಸುವ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೮೧೮ (೩೫೧೭) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕನಿಷ್ಠ ವೇತನ ಕಾಯ್ದೆ ಜಾರಿಯಲ್ಲಿದೆಯೇ ;

(ಆ) ಹಾಗಿದ್ದಲ್ಲಿ, ಅದರ ರೂಪ ರೇಷೆಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

(ಇ) ಕನಿಷ್ಠ ವೇತನವನ್ನು ನಿಗಧಿಪಡಿಸುವಾಗ ಮಾನದಂಡವೇನು ? (ಸಂಪೂರ್ಣ ಮಾಹಿತಿ ನೀಡುವುದು)

## ಬೀದರ ಜಿಲ್ಲೆ ನೌಬಾದ ಗ್ರಾಮದ ಸರ್ವೆ ನಂ. ೪ ಎಕರೆ ೨೪ ಗುಂಟೆ ಭೂಮಿ ಮುಟೇಷನ್ ರಿಜಿಸ್ಟ್ರಾರಿನ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೨೮೧೯ (೩೫೨೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯ ನೌಬಾದ ಗ್ರಾಮದ ಸರ್ವೆ ನಂಬರ್‌ನಲ್ಲಿ ೪ ಎಕರೆ ೨೪ ಗುಂಟೆ ಭೂಮಿ ಹಕ್ಕು ಬದಲಾವಣೆ ಪ್ರಯುಕ್ತ ಗಣಕ ಕೇಂದ್ರದ ಮುಟೇಷನ್ ರಿಜಿಸ್ಟ್ರಾರಿನ ಕ್ರಮ ಸಂಖ್ಯೆ ೧೬ ದಿನಾಂಕ: ೧೨–೧೧–೨೦೦೫ ಮತ್ತು ೦೬–೧೨–೨೦೦೫ ರಲ್ಲಿ ನಮೂದಿಸಲಾದ ಗ್ರಾಮಲೆಕ್ಕಿಗರ ಮತ್ತು ಕಂದಾಯ ನಿರೀಕ್ಷಕರ ಷರಾದ ಸಾರಾಂಶ ಏನು ; (ವಿವರ ನೀಡುವುದು)

(ಆ) ಸದರಿ ಷರಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ಬಾರದೆ ಇದ್ದರು ಯಾವುದೇ ನೋಟಿಸು ಜಾರಿಗೆ ಮಾಡದೆ ಏಕಪಕ್ಷೀಯವಾಗಿ ಆದೇಶ ಮಾಡಿರುವುದರಿಂದ ಎನ್.ಜಿ.ಓ ಗೃಹ ನಿವೇಶನ ಸಹಕಾರ ಸಂಘ, ಬೀದರ, ಇವರನ್ನು ಸಾಮಾಜಿಕ ನ್ಯಾಯ ಒದಗಿಸುವಲ್ಲಿ ವಂಚಿಸಲಾಗಿರುವುದರಿಂದ ಸಾಮಾಜಿಕ ನ್ಯಾಯ ಒದಗಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು ?

## ಬೆಣ್ಣೆತೋರಾ, ಗಂಡೋರಿನಾಲಾ, ಅಮರ್ಜಾ ಮತ್ತು ಕಾರಂಜಾ ಯೋಜನೆಗಳ ವೆಚ್ಚಗಳ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೨೮೨೦ (೩೫೨೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಣ್ಣೆತೋರಾ, ಗಂಡೋರಿನಾಲಾ ಅಮರ್ಜಾ ಮತ್ತು ಕಾರಂಜಾ ಯೋಜನೆಗಳಿಗೆ ಇಲ್ಲಿಯುವರೆಗೆ ಆದಂತಹ ವೆಚ್ಚ ಎಷ್ಟು; (ಯೋಜನಾವಾರು ವಿವರ ನೀಡುವುದು)

(ಆ) ಸದರಿ ಯೋಜನೆಗಳ ಕಾಲುವೆಗಳು ಸುಸ್ಥಿತಿಯಲ್ಲಿವೆಯೇ; ಮುಖ್ಯ ಕಾಲುವೆ, ಡಿಸ್ಟ್ರಿಬ್ಯೂಟರಿ ಮತ್ತು ಫೀಲ್ಡ್ ಇರಿಗೇಷನ್ ಕಾಲುವೆ ಇವುಗಳ ಮಾಹಿತಿ ಯೋಜನೆವಾರು ಮಾಹಿತಿ ನೀಡುವುದು;

(ಇ) ಸದರಿ ಯೋಜನೆಗಳ ನವೀಕರಣ, ಪುನಶ್ಚೇತನ ಮತ್ತು ದುರಸ್ಥಿ ಕಾರ್ಯ ಮೇಲೆ ಇಲ್ಲಿಯುವರೆಗೆ ಮಾಡಿದ ವೆಚ್ಚ ಎಷ್ಟು; (ಯೋಜನಾವಾರು, ಕಾಮಗಾರಿವಾರು ವಿವರ ನೀಡುವುದು)

(ಈ) ಸದರಿ ಯೋಜನೆಗಳ ನವೀಕರಣ, ಪುನಶ್ಚೇತನ ಮತ್ತು ದುರಸ್ಥಿ ಕಾರ್ಯ ಮಾಡುವ ಪ್ರಸ್ತಾವನೆ ಇಲಾಖೆ ಮುಂದಿದೆಯೇ ಇದ್ದರೆ, ಯೋಜನಾವಾರು, ವೆಚ್ಚವಾರು, ಕಾಮಗಾರಿವಾರು ಸಂಪೂರ್ಣ ವಿವರ ನೀಡುವುದು ?

## ಹೈದರಾಬಾದ್ ಕರ್ನಾಟಕ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಛೇರಿಯ ಲೆಕ್ಕ ಪರಿಶೋಧನೆಯ ವರದಿ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೨೮೨೧ (೩೫೨೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದರಾಬಾದ್ ಕರ್ನಾಟಕ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಛೇರಿಯ ಇತ್ತೀಚಿನ ಲೆಕ್ಕಪರಿಶೋದನೆಯನ್ನು ಮಹಾಲೇಖಪಾಲಕರು, (ಎಜಿ) ಮಾಡಿರುತ್ತಾರೆಯೇ; ಇದ್ದಲ್ಲಿ ೫ ವರ್ಷಗಳಲ್ಲಿ ನೀಡಿದ ವರದಿ ಪ್ಯಾರಾಗಳ ಸಹಿತ ವರ್ಷವಾರು, ಜಿಲ್ಲಾವಾರು ಮಾಹಿತಿ ನೀಡುವುದು;

(ಆ) ಸದರಿ ವರದಿಯಲ್ಲಿ ಕಾನೂನು ಹಾಗೂ ನಿಯಮಗಳ ಉಲ್ಲಂಘನೆಯಾದ ಬಗ್ಗೆ ಉಲ್ಲೇಖ ಮಾಡಲಾಗಿದೆಯೇ ; ಆಗಿದ್ದರೆ, ೫ ವರ್ಷಗಳ ವರ್ಷವಾರು, ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು ;

(ಇ) ಕಾನೂನು ಹಾಗೂ ನಿಯಮಗಳ ಉಲ್ಲಂಘನೆಯಾದ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

## ಬೀದರ ಜಿಲ್ಲೆಯ ನೌಬಾದ ಗ್ರಾಮ ಸರ್ವೆ ನಂ. ೭೪ ರಲ್ಲಿ ಕೃಷಿ ಜಮೀನಿನ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೨೮೨೨ (೩೫೨೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ ಜಿಲ್ಲೆಯ ನೌಬಾದ ಗ್ರಾಮದ ಸರ್ವೆ ನಂ. ೭೪ ರಲ್ಲಿ ೪ ಎಕರೆ ೨೪ ಗುಂಟೆ ಕೃಷಿ ಜಮೀನನ್ನು ಕೃಷಿಯೇತರ ಜಮೀನಾಗಿ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದು ಯಾವಾಗ ; ಯಾವ ಉದ್ದೇಶಕ್ಕಾಗಿ ಕೃಷಿಯೇತರ ಜಮೀನಾಗಿ ಆದೇಶಿಸಲಾಗಿರುತ್ತದೆ ; ಸದರಿ ಜಮೀನನ್ನು ಯಾರಿಂದ ಯಾರಿಗೆ ಮತ್ತು ಯಾವಾಗ ಮಾರಾಟ ಮಾಡಲಾಗಿರುತ್ತದೆ ; (ಸಂಪೂರ್ಣ ವಿವರ ನೀಡುವುದು)

(ಆ) ಸದರಿ ಕೃಷಿಯೇತರ ಜಮೀನಿನಲ್ಲಿ ಯೋಜನೆ ಪ್ರಾಧಿಕಾರ ಬೀದರ, ಇವರ ಆದೇಶ ಸಂಖ್ಯೆ ಬಿ.ಸಿ.ಪಿ.ಎ/೧೩೭/೧೯೮೪–೮೫/೧೭೪ ದಿನಾಂಕ: ೨೬–೦೪–೧೯೮೪ ರಲ್ಲಿ ಎಷ್ಟು ನಿವೇಶನಗಳು ಅನುಮೋದನೆ ಹೊಂದಿರುತ್ತವೆ ಹಾಗೂ ಯಾರ ಹೆಸರಿಗೆ ಅನುಮೋದನೆಗೊಂಡಿರುತ್ತವೆ ? (ಸಂಪೂರ್ಣ ಮಾಹಿತಿ ನೀಡುವುದು)

(ಇ) ಸದರಿ ಜಮೀನನ್ನು ಕೃಷಿಯೇತರ ಜಮೀನಾಗಿ ಜಿಲ್ಲಾಧಿಕಾರಿಗಳು, ಬೀದರ, ಇವರು ದಿನಾಂಕ: ೦೩-೧೨-೧೯೮೪ ರಲ್ಲಿ ಆದೇಶ ಹೊರಡಿಸಿ ಪಹಣಿ ಪತ್ರಿಕೆ ಕಾಲಂ ೧೧ ರಲ್ಲಿ ಷರಾ ನಮೂದಿಸಲು ತಹಶೀಲ್ದಾರರು, ಬೀದರ, ಇವರಿಗೆ ನೀಡಿದ್ದರೂ ಷರಾ ನಮೂದಿಸದೆ ಇರುವುದನ್ನು ಕಾರಣಗಳೇನು ; (ಮಾಹಿತಿ ನೀಡುವುದು)

(ಈ) ಉಪ ನೊಂದಣಾಧಿಕಾರಿ, ಬೀದರ, ಇವರ ಕಾರ್ಯಾಲಯದ ಮಾರಾಟ ಕ್ರಯ ಪತ್ರ ಸಂಖ್ಯೆ ೩೮೬೩/೨೦೦೭-೨೦೦೮ ದಿನಾಂಕ: ೧೭-೦೫/೨೦-೦೮-೨೦೦೭ ರಂದು ಯಾವ ಗ್ರಾಮದ ಎಷ್ಟು ಭೂಮಿ ಯಾರಿಂದ ಯಾರ ಹೆಸರಿಗೆ ಎಷ್ಟು ಬೆಲೆಗೆ ನೋಂದಣಿ ಮಾಡಲಾಗಿದೆ ? (ಗ್ರಾಮ, ಭೂಮಿ, ಮೊತ್ತದ ಸಂಪೂರ್ಣ ವಿವರ ನೀಡುವುದು)

## ಕಲಬುರಗಿ ತಾಲೂಕಿನ ಮಹಾಗಾಂವ ಕ್ರಾಸ್ ಹತ್ತಿರ ಸರ್ವೆ ನಂ ೧೨೯ನಲ್ಲಿ ಕ್ರೀಡಾಂಗಣ ನಿರ್ಮಾಣ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೨೮೨೩ (೩೫೧೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಲಬುರಗಿ ತಾಲೂಕಿನ ಮಹಾಗಾಂವ ಕ್ರಾಸ್ ಹತ್ತಿರ ಕಲಬುರಗಿ-ಬೀದರ್ ರಾಷ್ಟ್ರೀಯ ಹೆದ್ದಾರಿ ಮೇಲೆ ಸರ್ಕಾರಿ ಜಮೀನು ಸರ್ವೆ ನಂ.೧೨೯, ೨೨ ಎಕರೆ ಸರ್ಕಾರಿ ಜಮೀನು ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣ ಮಾಡಲು ಮಂಜೂರು ಮಾಡಲಾಗಿರುವ ವಿಷಯ ಸರ್ಕಾರದ ಗಮನಕ್ಕಿದೆಯೇ ; (ಸಂಪೂರ್ಣ ವಿವರ ನೀಡುವುದು)

(ಆ) ಸದರಿ ಮಂಜೂರಾದ ಸರ್ಕಾರಿ ಜಮೀನನ್ನು ಕ್ರೀಡಾಂಗಣ ನಿರ್ಮಾಣಕ್ಕಾಗಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಗೊಳಿಸಲಾಗಿದೆಯೇ ; (ವಿವರ ನೀಡುವುದು)

(ಇ) ಹಸ್ತಾಂತರ ಆಗದೆ ಇದ್ದರೆ ಸದರಿ ಜಮೀನನ್ನು ಕ್ರೀಡಾ ಇಲಾಖೆಗೆ ಹಸ್ತಾಂತರಿಸಲು ಸರ್ಕಾರ ಕ್ರಮ ವಹಿಸಲು ಮುಂದಾಗುವುದೇ ? (ವಿವರ ನೀಡುವುದು)

## ರಾಜ್ಯದಲ್ಲಿನ ಕಟ್ಟಡ ಕಾರ್ಮಿಕರ ವಿಚಾರ

**ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೮೨೪ (೩೫೨೮) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸಂಘಟನೆಗಾಗಿ ನೋಂದಾಯಿಸಿಕೊಂಡು ಕಾರ್ಯನಿರ್ವಹಿಸುತ್ತಿರುವ ಕಟ್ಟಡ ನಿರ್ಮಾಣದ ಕಾರ್ಮಿಕರ ಸಂಘಟನೆಗಳು ಯಾವುವು ;

(ಆ) ಜಿಲ್ಲಾವಾರು ನೋಂದಾಯಿಸಿಕೊಂಡಿರುವ ಕಟ್ಟಡ ಕಾರ್ಮಿಕರ ಸಂಘಗಳ ವಿವರ ನೀಡುವುದು ; ನೋಂದಾಯಿಸಿಕೊಳ್ಳುವಾಗ ಕಾರ್ಮಿಕರಿಂದ ಸಂಗ್ರಹಿಸುವ ಹಣ ಎಷ್ಟು ;

(ಇ) ರಾಜ್ಯದಲ್ಲಿ ಈವರೆಗೆ ಸಂಗ್ರಹವಾದ ಕಟ್ಟಡ ಕಾರ್ಮಿಕರ ಹಣ ಎಷ್ಟು ; ಈ ಹಣದಲ್ಲಿ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳಿಗೆ ವೆಚ್ಚ ಮಾಡಿರುವ ಹಣ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

## ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದವರಿಗೆ ಸ್ಮಶಾನ ನೀಡುವ ವಿಚಾರ

**ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೮೨೫ (೩೫೨೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಎಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದವರಿಗಾಗಿ ಸ್ಮಶಾನ ಭೂಮಿ ಇರುವುದಿಲ್ಲ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸ್ಮಶಾನ ಭೂಮಿ ಇಲ್ಲದ ಕಡೆ ಸರ್ಕಾರ ಭೂಮಿಯುನ್ನು ಗುರುತಿಸಿದೆಯೇ ; ಹಾಗಿದ್ದಲ್ಲಿ, ಎಷ್ಟು ಕಡೆ ಗುರುತಿಸಲಾಗಿದೆ ; (ವಿವರ ನೀಡುವುದು)

(ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ? (ವಿವರವಾದ ಮಾಹಿತಿ ನೀಡುವುದು)

## ತುಂಗಾ ಎಡದಂಡೆ ನಾಲೆಗೆ ಕಲುಷಿತ ನೀರು ಸೇರುತ್ತಿರುವ ವಿಚಾರ

**ಶ್ರೀ ಭಾನುಪ್ರಕಾಶ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೮೨೬ (೩೫೩೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶಿವಮೊಗ್ಗ ನಗರದಲ್ಲಿ ಹಾದು ಹೋಗುತ್ತಿರುವ ತುಂಗಾ ಎಡದಂಡೆ ನಾಲೆಗೆ ಮನೆಗಳ ಶೌಚಾಲಯದಿಂದ ಶಿವಮೊಗ್ಗ ನಗರ ಪಾಲಿಕೆಯ ಯು.ಜಿ.ಡಿ. ಮತ್ತು ಚರಂಡಿಗಳಿಂದ ನೇರವಾಗಿ ತಾಜ್ಯ ವಸ್ತುಗಳು ಸೇರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ನಾಲೆ ದಂಡೆಗಳ ಮೇಲೆ ನಿರ್ಮಾಣವಾಗಿರುವ ಮನೆ ಜನರು ಈ ನೀರನ್ನು ತಮ್ಮ ದಿನನಿತ್ಯದ ಬಳಕೆಗೆ ಬಳಸುತ್ತಿರುವುದು ಸರ್ಕಾರ ಗಮನಿಸಿದೆಯೇ ;

(ಇ) ತ್ಯಾಜ್ಯ ವಸ್ತುಗಳನ್ನು ತುಂಗಾ ನಾಲೆಗೆ ಸೇರಿಸದೇ ಇರುವಂತೆ ಮಾಡಲು ಸರ್ಕಾರದ ಕ್ರಮಗಳೇನು ;

(ಈ) ಕೃಷಿ ಕಾರ್ಯಕ್ಕಾಗಿ ಉಪಯೋಗಿಸುವ ಈ ನಾಲೆ ನೀರು ಕಲುಷಿತವಾದಲ್ಲಿ ರೈತರ ಹಿತಕ್ಕೆ ಮಾರಕವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಪರಿಹಾರ ಕ್ರಮಗಳ ಬಗ್ಗೆ ಸರ್ಕಾರದ ಕಾರ್ಯಗಳೇನು ? (ವಿವರ ನೀಡುವುದು)

## ಗಾಜನೂರು ಮತ್ತು ಶರಾವತಿ ನದಿಯ ಲಿಂಗನಮಕ್ಕಿ ಅಣೆಕಟ್ಟು ಹೂಳು ಮತ್ತು ಮರಳು ಬಗ್ಗೆ

**ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೮೨೭ (೩೫೩೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುಂಗಾ ನದಿಯ ಗಾಜನೂರು ಅಣೆಕಟ್ಟು ಹಾಗೂ ಶರಾವತಿ ನದಿಯ ಲಿಂಗನಮಕ್ಕಿ ಅಣೆಕಟ್ಟುಗಳು ನದಿಯ ಜೊತೆಗಾಗಿ ಬರುವ ಹೂಳು ಮತ್ತು ಮರಳಿನ ಕಾರಣ ಪ್ರತಿ ವರ್ಷ ನೀರು ಸಂಗ್ರಹಿಸುವ ಸಾಮರ್ಥ್ಯ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳೆದ ೨೦೧೨, ೨೦೧೩, ೨೦೧೪ರಲ್ಲಿ ಎರಡು ಅಣೆಕಟ್ಟುಗಳಲ್ಲಿ ಸಂಗ್ರಹವಾದ ನೀರಿನ ಪ್ರಮಾಣ ಎಷ್ಟು;

(ಆ) ಹೂಳು ಮತ್ತು ಮರಳನ್ನು ವಿಲೇ ಮಾಡಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ; ಕಳೆದ ಮೂರು ವರ್ಷಗಳಲ್ಲಿ ವಿಲೇ ಮಾಡಿರುವ ಹೂಳು ಮತ್ತು ಮರಳಿನಿಂದ ಬಂದ ಆದಾಯ ಎಷ್ಟು;

(ಇ) ಹೂಳು ಮತ್ತು ಮರಳನ್ನು ವಿಲೇ ಮಾಡಲು ಸರ್ಕಾರ ಅನುಸರಿಸುತ್ತಿರುವ ಕ್ರಮಗಳೇನು; ವಿವರ ನೀಡುವುದು?

## ಜಿಲ್ಲಾಧಿಕಾರಿಗಳು ಮತ್ತು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯ ಪ್ರಕರಣ ಬಗ್ಗೆ

**ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೮೨೮ (೩೫೨೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿನ ಜಿಲ್ಲಾಧಿಕಾರಿಗಳು ಮತ್ತು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ಕಳೆದ ಮೂರು ವರ್ಷಗಳಿಂದ ಬಾಕಿ ಇರುವ ಪ್ರಕರಣಗಳೆಷ್ಟು; (ವರ್ಷವಾರು ಮಾಹಿತಿ ನೀಡುವುದು)

(ಆ) ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಮಾಡಲು ಸರ್ಕಾರ ಯಾವುದಾದರೂ ಯೋಜನೆಯನ್ನು ಕೈಗೊಂಡಿದೆಯೇ;

(ಇ) ಇಲ್ಲದಿದ್ದಲ್ಲಿ, ಈ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಕಾಲಮಿತಿಯನ್ನು ನಿಗಧಿಪಡಿಸಲಾಗುವುದೇ?

## ಬರ ಪೀಡಿತ ತಾಲ್ಲೂಕುಗಳ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೮೨೯ (೩೫೩೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯಲ್ಲಿ ಈ ಬಾರಿ ಬರ ಪೀಡಿತ ಪ್ರದೇಶಗಳೆಂದು ಘೋಷಿಸಿರುವ ತಾಲ್ಲೂಕುಗಳು ಯಾವುವು;

(ಆ) ಸದರಿ ಬರ ಪೀಡಿತ ತಾಲ್ಲೂಕುಗಳಿಗೆ ಬಿಡುಗಡೆ ಮಾಡಿದ ಪರಿಹಾರ ಧನವೆಷ್ಟು; ಈ ಅನುದಾನ ಸದ್ಬಳಿಕೆ ಆಗಿದೆಯೇ; (ಸಂಪೂರ್ಣ ವಿವರ ನೀಡುವುದು)

(ಇ) ಹಾಗಿದ್ದಲ್ಲಿ, ಬೆಳಗಾವಿ ಜಿಲ್ಲಾದ್ಯಂತ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಎಷ್ಟು; ಸದರಿ ರೈತರ ಕುಟುಂಬಕ್ಕೆ ಒದಗಿಸರುವ ಪರಿಹಾರ ಧನವೆಷ್ಟು? (ರೈತರ ವಿಳಾಸದೊಂದಿಗೆ ಸಂಪೂರ್ಣ ವಿವರ ನೀಡುವುದು)

## ಕೆರೆಗಳ ಅಭಿವೃದ್ಧಿ ಮತ್ತು ಕೆರೆಗಳ ಸುತ್ತ ಮುನ್ನೆಚ್ಚರಿಕೆ ವಹಿಸುವ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೮೩೦ (೩೫೫೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೨ ವರ್ಷಗಳಿಂದ ಸರ್ಕಾರ ಕೆರೆಗಳ ಅಭಿವೃದ್ಧಿಗಾಗಿ ಬಿಡುಗಡೆ ಮಾಡಿರುವ ಮೊತ್ತವೆಷ್ಟು;

(ಆ) ಬಿಡುಗಡೆಯಾಗಿರುವ ಹಣದಲ್ಲಿ ಅಭಿವೃದ್ಧಿಗೊಂಡ ಕೆರೆಗಳಾವುವು; ಯಾವ ರೀತಿಯ ಅಭಿವೃದ್ಧಿಯನ್ನು ಈ ಕೆರೆಗಳಿಗೆ ಮಾಡಲಾಗಿದೆ;

(ಇ) ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ ಬದಿಯಲ್ಲಿರುವ ಹುಣಸೆಮಾರನಹಳ್ಳಿ ಕೆರೆ ಅಭಿವೃದ್ಧಿಗೆ ಸರ್ಕಾರ ಈ ಹಿಂದೆ ಹಣವನ್ನು ಬಿಡುಗಡೆ ಮಾಡಿದೆಯೇ; ಮಾಡಿದ್ದಲ್ಲಿ, ಈ ಕೆರೆಯಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ;

(ಈ) ಈ ಕೆರೆಯ ವಿಸ್ತೀರ್ಣವೆಷ್ಟು; ಕೆರೆ ಹೂಳೆತ್ತುವ ನೆಪದಲ್ಲಿ ಸುಮಾರು ೨೦ ರಿಂದ ೩೦ ಅಡಿ ಆಳಕ್ಕೆ ಆಗೆದಿದ್ದು, ಕೆರೆಯಲ್ಲಿ ಹತ್ತಾರು ಭಾವಿಗಳು ಸೃಷ್ಟಿ ಮಾಡಿರುವುದು ಸರ್ಕಾರ ಗಮನಿಸಿದೆಯೇ; ಇದರಿಂದ ವರ್ಷದಲ್ಲಿ ಸುಮಾರು ೨೦ ರಿಂದ ೨೫ ಜನರು ನಾನಾ ಕಾರಣಗಳಿಂದಾಗಿ ಹುಣಸೆವಾರನಹಳ್ಳಿ ಕೆರೆಗೆ ಬಲಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಹಾಗಿದ್ದಲ್ಲಿ, ಸದರಿ ಕರೆಗೆ ತಂತಿ ಬೇಲಿ ಹಾಕಿ, ಎಚ್ಚರಿಕಾ ಫಲಕಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಗುವುದೇ? (ವಿವರ ನೀಡುವುದು)

## ಆನೆಗಳ ದಾಳಿಯಿಂದ ಬೆಳೆ ಹಾನಿ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೮೩೧ (೩೫೪೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೨ ವರ್ಷಗಳಿಂದ ಕಾಡಾನೆಗಳ ದಾಳಿಯಿಂದಾಗಿ ಎಷ್ಟು ಎಕರೆ ಪ್ರದೇಶಗಳಲ್ಲಿ ರೈತರ ಬೆಳೆ ಹಾನಿ ನಾಶವಾಗಿದೆ;

(ಆ) ಈ ಅವಧಿಯಲ್ಲಿ ಕಾಡು ಪ್ರಾಣಿಗಳ ದಾಳಿಯಿಂದಾಗಿ ಗಾಯಗೊಂಡ ಮತ್ತು ಮೃತಪಟ್ಟವರ ಸಂಖ್ಯೆ ಎಷ್ಟು;

(ಇ) ಬೆಳೆ ನಾಶದಿಂದ ಹಾನಿಗೊಳಗಾದವರಿಗೆ ಮತ್ತು ಕಾಡು ಪ್ರಾಣಿಗಳಿಂದ ದಾಳಿಗೊಳಗಾಗಿ ಮೃತಪಟ್ಟ ಕುಟುಂಬಗಳಿಗೆ ಸರ್ಕಾರ ನೀಡಿರುವ ಪರಿಹಾರವೆಷ್ಟು; (ವರ್ಷವಾರು ಮಾಹಿತಿ ನೀಡುವುದು)

(ಈ) ಕಾಡು ಪ್ರಾಣಿಗಳ ಹಾವಳಿಯನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

## ಕುಡಿಯುವ ನೀರಿಗೆ ಕೆರೆಗಳ ದುರಸ್ತಿ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೮೩೨ (೩೫೪೦) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯಲ್ಲಿ ಕಳೆದ ೨ ವರ್ಷಗಳಿಂದ ಕುಡಿಯುವ ನೀರಿನ ಯೋಜನೆಗಾಗಿ ದುರಸ್ತಿಗೊಳಿಸಿರುವ ಕೆರೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈ ಕೆರೆಗಳ ದುರಸ್ತಿಗೆ ಬಿಡುಗಡೆ ಮಾಡಿರುವ ಮೊತ್ತವೆಷ್ಟು;

(ಇ) ಪ್ರಸ್ತುತ ಕಾಮಗಾರಿಗಳು ಪೂರ್ಣಗೊಂಡಿದೆಯೇ; ಇಲ್ಲದಿದ್ದಲ್ಲಿ, ಯಾವ ಹಂತದಲ್ಲಿದೆ? (ವಿವರ ನೀಡುವುದು)

## ಮಂಡ್ಯ ಜಿಲ್ಲೆಯಲ್ಲಿ ವಿವಿಧ ಯೋಜನೆಗಳಿಗೆ ಬಿಡುಗಡೆ ಮಾಡಿರುವ ಅನುದಾನದ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೮೩೩ (೩೫೪೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪ್ರಸಕ್ತ ಸಾಲಿನಲ್ಲಿ ವಿವಿಧ ಯೋಜನೆಗಳಿಗೆ ಕಂದಾಯ ಇಲಾಖೆ ವತಿಯಿಂದ ಮಂಡ್ಯ ಜಿಲ್ಲೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು;

(ಆ) ಬಿಡುಗಡೆ ಮಾಡಿರುವ ಅನುದಾನದಲ್ಲಿ ಹಮ್ಮಿಕೊಂಡಿರುವ ಯೋಜನೆಗಳಾವುವು;

(ಇ) ಯಾವ ಯಾವ ಯೋಜನೆಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ;

(ಈ) ಇವುಗಳಲ್ಲಿ ಪೂರ್ಣಗೊಂಡ ಯೋಜನೆಗಳಾವುವು; ಪೂರ್ಣಗೊಳ್ಳದೆ ಇರುವ ಯೋಜನೆಗಳಾವುವು; ಪೂರ್ಣಗೊಳಿಸಲು ತೆಗೆದುಕೊಳ್ಳುವ ಕಾಲಾವಕಾಶ ಎಷ್ಟು? (ವಿವರ ನೀಡುವುದು)

## ಕಾರ್ಮಿಕರ ಅನುಕೂಲಗಳ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೮೩೪ (೩೫೪೯) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಕಾರ್ಮಿಕ ಮಂಡಳಿಯಲ್ಲಿ ನೋಂದಾವಣೆ ಪಡೆದಿರುವ ಕಾರ್ಮಿಕರ ಸಂಖ್ಯೆ ಎಷ್ಟು; (ಪುರುಷ ಮತ್ತು ಮಹಿಳಾ ಕಾರ್ಮಿಕರ ವಿವರ ಪ್ರತ್ಯೇಕ ನೀಡುವುದು)

(ಆ) ಇವರುಗಳಿಗೆ ಮಂಡಳಿಯಿಂದ ಸಿಗುವ ಮೂಲಭೂತ ಸೌಕರ್ಯ ಅಥವಾ ಅನುಕೂಲಗಳೇನು;

(ಇ) ಕಳೆದ ೨ ವರ್ಷಗಳಲ್ಲಿ ಕಾರ್ಮಿಕ ಕಲ್ಯಾಣಕ್ಕಾಗಿ ಸರ್ಕಾರ ವೆಚ್ಚ ಮಾಡಿರುವ ಹಣವೆಷ್ಟು;

(ಈ) ಕಾರ್ಮಿಕರಿಗೆ ವೈದ್ಯಕೀಯ ವೆಚ್ಚ ಮರುಪಾವತಿಗೆ ಇ.ಎಸ್.ಐ. ಆಸ್ಪತ್ರೆ ಅಲ್ಲದೆ ಬೇರೆ ಆಸ್ಪತ್ರೆಗಳಲ್ಲಿ ಸೌಲಭ್ಯ ನೀಡಲಾಗವುದೇ;

(ಉ) ಹಾಗಿದ್ದಲ್ಲಿ, ಆ ಆಸ್ಪತ್ರೆಗಳು ಯಾವುವು? (ವಿವರ ನೀಡುವುದು)

## KBJNL ಗೆ ಒದಗಿಸಿದ ಅನುದಾನ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೨೮೩೫ (೩೫೪೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೩–೧೪, ೨೦೧೪–೧೫, ೨೦೧೫–೧೬ನೇ ಸಾಲಿನಲ್ಲಿ KBJNL ಗೆ ಒದಗಿಸಿದ ಅನುದಾನ ಎಷ್ಟು; ವಿನಿಯೋಗಿಸಿದ ಹಣ ಎಷ್ಟು;

(ಆ) ಯಾವ ಯಾವ ಮೂಲದಿಂದ ಎಷ್ಟು ಎಷ್ಟು ಹಣ ಒದಗಿಸಿಕೊಳ್ಳಲಾಗಿದೆ; ಯಾವ ಯಾವ ಕಾರ್ಯಗಳಿಗೆ/ ಕಾಮಗಾರಿಗಳಿಗೆ ಎಷು ಎಷ್ಟು ಹಣ ವಿನಿಯೋಗಿಸಲಾಗಿದೆ; (ವಿವರ ನೀಡುವುದು)

(ಇ) ನೂತನ ಭೂ ಸ್ವಾಧೀನದ ಕಾನೂನು ನಿಯಮಗಳು ಯಾವುವು;

(ಈ) ಕಳೆದ ೦೨ ವರ್ಷಗಳಲ್ಲಿ ಎಷ್ಟು ಎಕರೆ ಭೂ ಸ್ವಾಧೀನ ಪ್ರಕ್ರಿಯೆಗೆ ಕೈಗೊಳ್ಳಲಾಗಿರುವ ಕ್ರಮವೇನು?

## "ಬರ" ದಿಂದ ಉಂಟಾದ ನಷ್ಟ ಹಾಗೂ ಒದಗಿಸಿದ ಪರಿಹಾರದ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೨೮೩೬ (೩೫೪೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಈ ಬಾರಿ ಬರ ಪೀಡಿತ ಪ್ರದೇಶಗಳಿಗೆ ಹಾಗೂ ರೈತರಿಗೆ ಎಷ್ಟು ಪರಿಹಾರ ಧನ ನೀಡಲಾಗಿದೆ;

(ಆ) ಈ ಬರದಿಂದ ರೈತರಿಗೆ ಆದ ನಷ್ಟ ಎಷ್ಟು; ನೀಡಿದ ಮೊತ್ತ ಹಾಗೂ ಒಟ್ಟು ರೈತರ ಸಂಪೂರ್ಣ ವಿವರ ನೀಡುವುದು;

(ಇ) ಈ ಬರ ಪರಿಹಾರ ನಿಟ್ಟಿನಲ್ಲಿ ಸರ್ಕಾರ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ; ಅದರಲ್ಲಿ ಖರ್ಚಾದ ಹಣ ಎಷ್ಟು;

(ಈ) ಬರ ಉಂಟಾದುದರಿಂದ ಹಾನಿಯಾದ ಬೆಳೆ ಹಾಗೂ ಆದರ ಒಟ್ಟು ನಷ್ಟ ಎಷ್ಟು ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಹಾಗೂ ಒದಗಿಸಿದ ಪರಿಹಾರ ಧನ ಎಷ್ಟು? (ಸಂಪೂರ್ಣ ವಿವರ ನೀಡುವುದು)(ಪ್ರತಿಯೊಬ್ಬ ರೈತನ ವಿವರ ನೀಡುವುದು)

## ಜಲಾಶಯಗಳಲ್ಲಿನ ನೀರಿನ ಪ್ರಮಾಣ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೨೮೩೭ (೩೫೪೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿನ ಪ್ರಮುಖ ಜಲಾಶಯಗಳಲ್ಲಿ ಪ್ರಸ್ತುತ ಸಂಗ್ರಹವಿರುವ ನೀರಿನ ಪ್ರಮಾಣವೆಷ್ಟು; (ಜಲಾಶಯಗಳ ಪ್ರತ್ಯೇಕ ವಿವರ ನೀಡುವುದು)

(ಆ) ಕೃಷಿ ಮತ್ತು ಕುಡಿಯಲು ಉಪಯೋಗಿಸಲು ಪ್ರಸ್ತುತ ಸಂಗ್ರಹದಲ್ಲಿರುವ ನೀರಿನ ಕೊರತೆಯ ಪ್ರಮಾಣವೇನು ; (ಪ್ರತ್ಯೇಕ ವಿವರ ನೀಡುವುದು; ಜೊತೆಗೆ ಶೇಕಡಾವಾರು ಕೊರತೆಯ ವಿವರ ನೀಡುವುದು)

(ಇ) ಈ ಸಂಬಂಧ ನೀರನ್ನು ಉಪಯೋಗಿಸಲು ಯಾವ ರೀತಿಯ ತೀರ್ಮಾನಕ್ಕೆ ಬರಲಾಗಿದೆ? (ಜಲಾಶಯಗಳ ಪ್ರತ್ಯೇಕ ವಿವರ ನೀಡುವುದು)

## ವ್ಯಾಯಾಮ ಕೇಂದ್ರಗಳನ್ನು ತೆರೆಯುವ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೨೮೩೮ (೨೭೯೪) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಎಷ್ಟು ಕಡೆಗಳಲ್ಲಿ ಜಿಮ್ ವ್ಯಾಯಾಮ ಕೇಂದ್ರಗಳನ್ನು ತೆರಯಲಾಗಿದೆ;

(ಆ) ಇಲ್ಲವಾದಲ್ಲಿ ತೆರೆಯದಿರಲು ಕಾರಣವೇನು;

(ಇ) ಪ್ರಸ್ತುತ ಎಷ್ಟು ಕಡೆಗಳಲ್ಲಿ ಸರ್ಕಾರದಿಂದ ಸದರಿ ವ್ಯಾಯಾಮ ಕೇಂದ್ರಗಳು ಚಾಲ್ತಿಯಲ್ಲಿವೆ ;

(ಈ) ಇದನ್ನು ನಿರ್ವಹಿಸುವ ಕುರಿತು ವಿವರ ನೀಡುವುದು?

## ಕ್ರೀಡಾ ಪ್ರಾಧಿಕಾರ ಸ್ಥಾಪನೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೨೮೩೯ (೩೫೪೭) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಐಪಿಎಸ್ ಆನಂದನ್ ರವರು ಕ್ರೀಡಾ ಪ್ರಾಧಿಕಾರವನ್ನು ಸ್ಥಾಪಿಸಿದ್ದು ಯಾವಾಗ;

(ಆ) ರಾಜ್ಯದಲ್ಲಿ ಕ್ರೀಡೆಯನ್ನು ಅಭಿವೃದ್ಧಿಗೊಳಿಸಲು, ಸದರಿ ಸಂಸ್ಥೆಗೆ ಇರುವ ಕಾರ್ಯ ವ್ಯಾಪ್ತಿ ಹಾಗೂ ಅಧಿಕಾರಗಳೇನು;

(ಇ) ಸದರಿ ಪ್ರಾಧಿಕಾರವು ಕಳೆದ ಎರಡು ವರ್ಷಗಳಿಂದ ರಾಜ್ಯದಲ್ಲಿ ಕ್ರೀಡೆಯನ್ನು ಯಾವ ರೀತಿಯಲ್ಲಿ ಅಭಿವೃದ್ಧಿಪಡಿಸಿದೆ?

## ಕೈಗಾರಿಕಾ ತರಬೇತಿ ಸಂಸ್ಥೆಗಳ ಬಗ್ಗೆ

**ಶ್ರೀ ಎಸ್.ವ್ಹಿ. ಸುಂಕನೂರ (ಪದವೀಧರರ ಕ್ಷೇತ್ರ) :–**

೨೮೪೦ (೩೫೫೦) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಎಷ್ಟು; (ಜಿಲ್ಲೆ ಹಾಗೂ ತಾಲ್ಲೂಕುವಾರು ವಿವರ ನೀಡುವುದು)

(ಆ) ಸ್ವಂತ ಕಟ್ಟಡವನ್ನು ಹೊಂದಿರುವ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಎಷ್ಟು; ಬಾಡಿಗೆ ಕಟ್ಟಡಗಳಲ್ಲಿ ಎಷ್ಟು ಸಂಸ್ಥೆಗಳು ನಡೆಯುತ್ತಿವೆ ;

(ಇ) ಸ್ವಂತ ಕಟ್ಟಡ ಹೊಂದಿದ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಮೂಲಭೂತ ಸೌಲಭ್ಯಗಳಾದ ಪ್ರಯೋಗಾಲಯ, ವಾಚನಾಲಯ ಮತ್ತು ಪ್ರಯೋಗಾಲಯಗಳಿಗೆ ಬೇಕಾಗಿರುವ ಎಲ್ಲಾ ಯಂತ್ರೋಪಕರಣಗಳನ್ನು ಒದಗಿಸಲಾಗಿದೆಯೇ ;

(ಈ) ರಾಜ್ಯದಲ್ಲಿ ಎಷ್ಟು ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವವು ; ಇವುಗಳಲ್ಲಿ ಎಷ್ಟು ಸಂಸ್ಥೆಗಳಿಗೆ ಮತ್ತು ಯಾವ ದಿನಾಂಕದವರೆಗೆ ಅನುದಾನವನ್ನು ನೀಡಲಾಗಿರುವುದು ಇನ್ನು ಎಷ್ಟು ಖಾಸಗಿ ಸಂಸ್ಥೆಗಳಿಗೆ ಅನುದಾನಕ್ಕೆ ಒಳಪಡಿಸಬೇಕಾಗಿದೆ ;

(ಉ) ರಾಜ್ಯದ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಸ್ಟಾಫಿಂಗ್ ಪ್ಯಾರ್ಟ್‌ನ್ ಪ್ರಕಾರ ಎಷ್ಟು ಹುದ್ದೆಗಳು ಅವಶ್ಯಕತೆ ಇರುವುವು; ಅವುಗಳಲ್ಲಿ ಎಷ್ಟು ಹುದ್ದೆಗಳನ್ನು ತುಂಬಲಾಗಿದೆ ? ಇನ್ನೂ ಎಷ್ಟು ಹುದ್ದೆಗಳನ್ನು ತುಂಬಬೇಕಾಗಿದೆ ?

## ಕೆರೆ ಒತ್ತುವರಿ ತೆರವುಗೊಳಿಸುವ ಕುರಿತು

**ಶ್ರೀ ಜಗ್ಗೇಶ್ (ನಾಮನಿರ್ದೇಶನ ಹೊಂದಿದವರು) :–**

೨೮೪೧ (೩೫೩೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲ್ಲೂಕು, ಕಸಬಾ ಹೋಬಳಿಯ ಗುಡ್ಡೇನಹಳ್ಳಿ ಕೆರೆಯ ಮೂಲ ವಿಸ್ತೀರ್ಣ ಎಷ್ಟು ;

(ಆ) ಸದರಿ ಕೆರೆಯ ಸುತ್ತ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಒತ್ತುವರಿಯಾಗಿರುವ ವಿಸ್ತೀರ್ಣ ಎಷ್ಟು;

(ಇ) ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ; ಯಾವಾಗ ಒತ್ತುವರಿ ತೆರವು ಕಾರ್ಯ ಪೂರ್ಣಗೊಳ್ಳುವುದು ?

## ಸಾರ್ವಜನಿಕ ರಸ್ತೆ ಬಿಡಿಸುವ ಕುರಿತು

**ಶ್ರೀ ಜಗ್ಗೇಶ್ (ನಾಮನಿರ್ದೇಶನ ಹೊಂದಿದವರು) :–**

೨೮೪೨ (೩೫೩೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮುಖ್ಯ ರಸ್ತೆ ಬದಿ ಇರುವ ಖಾಸಗಿ ಜಮೀನುದಾರರು/ಖಾಸಗಿ ವಸತಿ ಪ್ರದೇಶವುಳ್ಳ ಮಾಲೀಕರು ಕೆಳಹಂತದ ವಸತಿ ಪ್ರದೇಶದವರಿಗೆ ಸಂಚಾರಕ್ಕೆ ರಸ್ತೆ ಬಿಡದೆ ಇದ್ದ ರಸ್ತೆಯನ್ನು ಖಾಸಗಿ ಸ್ವತ್ತೆಂದು ಬೇಲಿ ಹಾಕಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ರೀತಿ ಸಾರ್ವಜನಿಕರಿಗೆ ಸಂಚಾರಕ್ಕೆ ರಸ್ತೆ ನಿರಾಕರಿಸಿದರೆ, ರಸ್ತೆ ಬಿಡಿಸಿಕೊಡಲು ಸರ್ಕಾರದ ಮುಂದಿರುವ ನೀತಿ ನಿಯಮಗಳೇನು? (ವಿವರ ನೀಡುವುದು)

## ಹೊಸ 100 ಐ.ಟಿ.ಐ.ಗಳಿಗೆ ಮೂಲಸೌಕರ್ಯ ಮಂಜೂರಾತಿ ಬಗ್ಗೆ

**ಶ್ರೀ ಜಗ್ಗೇಶ್ (ನಾಮನಿರ್ದೇಶನ ಹೊಂದಿದವರು) :–**

೨೮೪೩ (೩೫೩೪) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸ್ಥಾಪಿತವಾದ ೧೦೦ ಹೊಸ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಯಾವಾಗಿನಿಂದ ಕಾರ್ಯಾರಂಭ ಮಾಡುವುವು; ಈ ಸಂಸ್ಥೆಗಳನ್ನು ರಾಜ್ಯದ ಯಾವ್ಯಾವ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ; (ವಿವರ ನೀಡುವುದು)

(ಆ) ಹೊಸದಾಗಿ ಸೃಜಿಸಿರುವ ೧೦೦ ಹೊಸ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಅಗತ್ಯವಿರುವ ಸಿಬ್ಬಂದಿಗಳು ಹಾಗೂ ಮೂಲಸೌಕರ್ಯಗಳು ಮಂಜೂರಾಗಿವೆಯೇ; ಆಗಿದ್ದಲ್ಲಿ, ಯಾವ ಹಂತದಲ್ಲಿದೆ ? (ಸಂಖ್ಯಾಸಹಿತ ವಿವರ ನೀಡುವುದು)

## ಮರಗಳನ್ನು ಕಡಿಯುವುದನ್ನು ತಡೆಯುವ ಕುರಿತು

**ಶ್ರೀ ಜಗ್ಗೇಶ್ (ನಾಮನಿರ್ದೇಶನ ಹೊಂದಿದವರು) :–**

೨೮೪೪ (೩೫೩೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಸಿರುನಗರ ಬೆಂಗಳೂರಿನಲ್ಲಿ ಜನ ತಮ್ಮ ಮನೆ ಮುಂದೆ ಇರುವ ಮರಗಳನ್ನು ಕುಂಟು ನೆಪ ಹೇಳಿ ಕಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದನ್ನು ತಡೆಯಲು ಕ್ರಮಗಳೇನು;

(ಆ) ಮರಗಳನ್ನು ಕಡಿಯುವುದಕ್ಕೆ ಅನುಮತಿ ನೀಡಲು ಇರುವ ಮಾನದಂಡಗಳೇನು ; (ವಿವರ ನೀಡುವುದು)

(ಇ) ಬೆಂಗಳೂರಿನಲ್ಲಿ ಇರುವ ಮರಗಳನ್ನು ಉಳಿಸುವ/ಬೆಳೆಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ?

## ಕೆರೆ ಒತ್ತುವರಿ ತೆರವುಗೊಳಿಸುವ ಕುರಿತು

**ಶ್ರೀ ಜಗ್ಗೇಶ್ (ನಾಮನಿರ್ದೇಶನ ಹೊಂದಿದವರು) :–**

೨೮೪೫ (೩೫೩೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕಿನ ಪುರಾತನ ಪ್ರಸಿದ್ಧ ದೇವೀರಮ್ಮಣಿ ಕೆರೆಯ ಒಟ್ಟು ವಿಸ್ತೀರ್ಣವೆಷ್ಟು ; ಹಾಲಿ ಈಗ ಉಳಿದಿರುವ ಕೆರೆಯ ವಿಸ್ತೀರ್ಣವೆಷ್ಟು ;

(ಆ) ಸದರಿ ದೇವೀರಮ್ಮಣಿ ಕೆರೆಯ ಸುತ್ತ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದರೆ, ಕೆರೆಯ ಒತ್ತುವರಿ ತೆರವುಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಅರಣ್ಯ ಭೂಮಿಯ ವಿಸ್ತರಣೆ

**ಶ್ರೀ ನಾರಾಯಣ ಸಾ. ಬಾಂಡಗೆ (ವಿಧಾನಸಭೆಯಿಂದ ಚುನಾಯಿತರಾದವರು):–**

೨೮೪೬ (೩೪೬೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಮತ್ತು ಗದಗ ಜಿಲ್ಲೆಯಲ್ಲಿರುವ ಅರಣ್ಯ ಭೂಮಿಯ ವಿಸ್ತರಣೆ ಎಷ್ಟು ; ಈ ಅರಣ್ಯ ಭೂಮಿಯಲ್ಲಿ ಒತ್ತುವರಿ ಮಾಡಿರುವ ವಿಸ್ತಿರಣ ಎಷ್ಟು ;

(ಆ) ಒತ್ತುವರಿ ಮಾಡಿರುವವರ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ಮಾಹಿತಿ ನೀಡುವುದು ?

## ಕೊಪ್ಪಳ ಜಿಲ್ಲೆಯಲ್ಲಿ ಇ.ಎಸ್.ಐ. ಆಸ್ಪತ್ರೆ ನಿರ್ಮಾಣ ಮಾಡುವ ಬಗ್ಗೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೮೪೭ (೩೨೭೮) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿ ಇ.ಎಸ್.ಐ. ಇದೆಯೇ ; ಇದ್ದಲ್ಲಿ ಎಲ್ಲಿದೆ; ಅಲ್ಲಿನ ಸಿಬ್ಬಂದಿಗಳ ವಿವರ ನೀಡುವುದು ;

(ಆ) ಆಸ್ಪತ್ರೆಯಲ್ಲಿ ಔಷಧಿ ದಾಸ್ತಾನು ಕೊರತೆಯೇನಾದರೂ ಇದೆಯೇ;

(ಇ) ಆಸ್ಪತ್ರೆ ಇಲ್ಲದೇ ಕಾರ್ಮಿಕ ವರ್ಗಕ್ಕೆ ಸಮರ್ಪಕ ಚಿಕಿತ್ಸೆ ದೊರೆಯದೇ ಬೇರೆ ಖಾಸಗಿ ಆಸ್ಪತ್ರೆಗಳಿಗೆ ತೆರಳುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಕೊಪ್ಪಳ ಜಿಲ್ಲೆಯಲ್ಲಿ ಸಾಕಷ್ಟು ಭಾರಿ ಮಧ್ಯಮ ಕೈಗಾರಿಕೆಯ ಹಾಗೂ ಸಾಕಷ್ಟು ಕಾರ್ಮಿಕ ವರ್ಗ ಇದ್ದೂ ಈ ಭಾಗದಲ್ಲಿ ಆಸ್ಪತ್ರೆ ತೆರೆಯಲು ಸರ್ಕಾರ ಮುಂದಾಗಿಲ್ಲವೇಕೆ ?

## ಪೋಡಿಮುಕ್ತ ಅಭಿಯಾನ ಕುರಿತು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೮೪೮ (೩೨೭೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ಭೂಮಾಪನ ಶಾಲೆಯಲ್ಲಿ ಪೋಡಿಮುಕ್ತ ಅಭಿಯಾನ ಪ್ರಕ್ರಿಯೆ ಪ್ರಸ್ತುತ ಯಾವ ಹಂತದಲ್ಲಿದೆ ;

(ಆ) ಈ ಅಭಿಯಾನದಲ್ಲಿ ಆಯ್ಕೆ ಮಾಡಿಕೊಂಡಿರುವ ಗ್ರಾಮಗಳಿಗೆ ಸಂಬಂಧಿಸಿದಂತೆ ಸ್ಥಳ ಬದಲಾವಣೆಯಾಗಿರುವ ಸರ್ವೆ ನಂಬರ್‌ಗಳ ಮಾಹಿತಿಯನ್ನು ನೀಡುವುದು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಕೊಪ್ಪಳ ಜಿಲ್ಲೆಯಲ್ಲಿ ಕಬ್ಜಾ ಇರುವ ಪಟ್ಟೇದಾರರು ಪಹಣಿಯಲ್ಲಿ ಬೇರೆ ಸರ್ವೆ ನಂಬರ್ ಹೊಂದಿರುವ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಇಂತಹ ಪ್ರಕರಣಗಳನ್ನು ಇತ್ಯರ್ಥಗೊಳಿಸುವಲ್ಲಿ ಇಲಾಖೆಯವರು ಅನುಸರಿಸಿದ ಕ್ರಮಗಳೇನು ;

(ಉ) ಸ್ವಾಧೀನದಾರರು ತಾವು ಕಬ್ಜಾ ಇರುವ ಸ್ಥಳವನ್ನು ಪಹಣಿಯಲ್ಲಿರುವ ಸರ್ವೆ ನಂಬರಿಗೆ ಹೊಂದಾಣಿಕೆ ಮಾಡಿಕೊಳ್ಳುವಲ್ಲಿ ಆಗುತ್ತಿರುವ ವಿಳಂಬವನ್ನು ತಪ್ಪಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು?

## ಚೆಕ್ ಡ್ಯಾಂ ನಿರ್ಮಾಣ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು) :–**

೨೮೪೯ (೩೪೬೩) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ೨ ವರ್ಷಗಳಿಂದ ಚೆಕ್ ಡ್ಯಾಂ ನಿರ್ಮಾಣ ಮಾಡಲು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ; ಜಿಲ್ಲಾವಾರು ಮಾಹಿತಿ ನೀಡುವುದು ;

(ಆ) ಕಳಪೆ ಗುಣಮಟ್ಟದ ಕಾಮಗಾರಿಗಳನ್ನು ಮಾಡಿರುವಂತ ಪ್ರಕರಣಗಳು ಇದ್ದರೆ ಗುತ್ತಿಗೆದಾರರ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ಜಿಲ್ಲಾವಾರು ಮಾಹಿತಿ ನೀಡುವುದು ?

## ರಾಷ್ಟ್ರೀಯ ಕುಟುಂಬ ನೆರವು ಯೋಜನೆ ಕುರಿತು

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು) :–**

೨೮೫೦ (೩೨೬೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಷ್ಟ್ರೀಯ ಕುಟುಂಬ ನೆರವು ಯೋಜನೆ ಅಡಿಯಲ್ಲಿ ಕಳೆದ ೩ ವರ್ಷಗಳಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಪರಿಹಾರ ಪಡೆದ ಕುಟುಂಬಗಳೆಷ್ಟು ;

(ಆ) ವಿತರಣೆಯಾದ ಪರಿಹಾರದ ಹಣವೆಷ್ಟು ;

(ಇ) ಸರ್ಕಾರದ ಮುಂದೆ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು;

(ಈ) ಪರಿಹಾರ ವಿತರಣೆಗೆ ಕೈಗೊಂಡಿರುವ ಕ್ರಮಗಳೇನು ?

## ಮೈಸೂರು ನಗರದಲ್ಲಿರುವ ವಿಕ್ರಾಂತ್ ಟೈರ್ ಕಾರ್ಖಾನೆ ನೌಕರರ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೮೫೧ (೩೦೩೩) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರಿನ ವಿಕ್ರಾಂತ್ ಟೈರ್ ಕಾರ್ಖಾನೆಯಲ್ಲಿ ಕಳೆದ ಹತ್ತು ವರ್ಷಗಳಿಂದ ಎಷ್ಟು ಜನ ದಿನಗೂಲಿ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಕಾರ್ಮಿಕ ಕಾಯಿದೆ ನಿಯಮಗಳ ಪ್ರಕಾರ ಇವರು ತಮ್ಮನ್ನು ಖಾಯಂ ಮಾಡಬೇಕೆಂದು ಪ್ರತಿಭಟನೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಬಗ್ಗೆ ಕಾರ್ಮಿಕ ಇಲಾಖೆ ಮಧ್ಯೆ ಪ್ರವೇಶ ಮಾಡಿ ಸತತವಾಗಿ ಹತ್ತಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಈ ದಿನಗೂಲಿ ನೌಕರರನ್ನು ಖಾಯಂಗೊಳಿಸುವ ಬಗ್ಗೆ ಕ್ರಮ ಜರುಗಿಸಲಾಗುವುದೇ? (ವಿವರ ನೀಡುವುದು)

## ಕೃಷಿ ಉದ್ದೇಶಕ್ಕೆ ಭೂಮಿ ಖರೀದಿಸುವ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೮೫೨ (೩೪೫೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತಂದೆ ತಾಯಿಗಳು ಕೃಷಿಕರಾಗಿದ್ದು, ಕಾರಣಾಂತರದಿಂದ ಜಮೀನುಗಳನ್ನು ಮಾರಿಕೊಂಡಿದ್ದಲ್ಲಿ ಅವರ ಮಕ್ಕಳು ಜಮೀನನ್ನು ಕೃಷಿ ಉದ್ದೇಶಕ್ಕಾಗಿ ಖರೀದಿಸಲು ಅವಕಾಶವಿದೆಯೇ ;

(ಆ) ಕೃಷಿಕರಿಲ್ಲದವರು ಕೃಷಿ ಉದ್ದೇಶಕ್ಕಾಗಿ ಖರೀದಿಸಿದ ಜಮೀನುಗಳನ್ನು ಅನ್ಯ ಉದ್ದೇಶಗಳಿಗಾಗಿ ಪರಿವರ್ತಿಸದಂತೆ ಮಾಡಲು ತಿದ್ದುಪಡಿ ತರಲಾಗುವುದೇ ? (ವಿವರ ನೀಡುವುದು)

## ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸರ್ವೆಯರ ಹುದ್ದೆಗಳ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೮೫೩ (೩೪೭೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ವಿಧಾನಸಭಾ ಕ್ಷೇತ್ರಗಳಲ್ಲಿ ಯಾವ ಯಾವ ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮಗಳನ್ನಾಗಿ ಮಾಡಲು ಆಯ್ಕೆ ಮಾಡಲಾಗಿದೆ ; (ವಿವರ ಒದಗಿಸುವುದು)

(ಆ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಮಂಜೂರಾಗಿರುವ ಸರ್ಕಾರಿ ಸರ್ವೆಯರ್‌ಗಳ ಸಂಖ್ಯೆ ಎಷ್ಟು ; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು ;

(ಇ) ಇದೇ ಜಿಲ್ಲೆಗಳಲ್ಲಿ ಪರವಾನಗಿ ಪಡೆದಿರುವ ಭೂಮಾಪಕರ ಸಂಖ್ಯೆ ಎಷ್ಟು ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. 0 210/800 ಪ್ರತಿಗಳು/19–11–2015